ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

ಡಿಸೆಂಬರ್ 2023 ಸಂಪುಟ 19
ಸಂಚಿಕೆ 12
ಸಂಚಿಕೆ ಬೆಲೆ ರೂ. 1/-

# ಸ್ನೇಹ ಚಿಂತನ ಮಾಸ ಪತ್ರಿಕೆ







ದೀಪಾವಳಿ ಆಚರಣೆ






ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು




BSRNS Composite P.U. College
Cultural Fest - 2023-24

324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com


Prashasthi
Modular Interiors
ಪ್ರಶಸ್ತಿ ಮಾಡ್ಯುಲಾರ್ ಇಂಟೀರ್ಯರ್ಸ್
Ramesh Shetty
Prashasthi Modular Interiors
Total Interior Solution for
Resdential &
Commercial
Service Undertaken as
Interior Decorators
Bringing Interiors to
Life !!
Work Station Wardrobe Living room
Modular Furniture •partitions •Wall Finishing •structural Glazing
Electrical | Air conditioning | Land scaping | Fire Protection | Fabrication
All types of wood works
Factory #3/4 Andrahalli Main Road, Vishwaneedam post, Near Peenya 2 nd stage , Bangalore-91
Mob- 9611648717/94488085444 | Email: prashasthi.modularinteriors@gmail.com www.prashasthiinteriors.com
ತಯಾರಕರು: ಪ್ರಶಸ್ತಿ ಮಾಡ್ಯುಲಾರ್ ಕಿಚನ್ಸ್ ಅಂಡ್ ಫರ್ನಿಚರ್

ADVT.

# ಸ್ನೇಹ ಚಿಂತನೆ

*Monthly Magazine Published by*
**BUNTS' SANGHA BANGALORE**

**VOL 19** | **DECEMBER 2023** | **ISSUE 11**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಹ ಸಂಪಾದಕರು :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. **– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | **ಪುಟ** |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಸಾರ್ವಕಾಲಿಕ ಸತ್ಯಗಳಾದ ಷೇಕ್ಸ್‌ಪಿಯರ್ ಉಲ್ಲೇಖಗಳು | 5–7 |
| Lakshmana Rekha | 8–9 |
| ಕ್ರೀಡಾ ಸಮಿತಿ ಅರ್ಜಿಗಳ ಆಹ್ವಾನ | 10 |
| ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ II ಕನ್ನಡ ರಾಜ್ಯೋತ್ಸವ ಆಚರಣೆ | 10 |
| ಅತಿಕಾರೆ | 11–13 |
| Scholorship & Awards Committee Awards For Exellence | 14–15 |
| ಬಂಟರ ಸಂಘ ಬೆಂಗಳೂರು– ದೀಪಾವಳಿ ಸಡಗರ | 16–17 |
| Bunts' Sangha RNS Evening College Report – Industrial Visit | 22 |

**ಮುಖ ಪುಟ**

ದೀಪಾವಳಿ ಆಚರಣೆ
ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು
BSRNS Composite P.U. College
Cultural Fest - 2023 - 24

# ಸಂಪಾದಕೀಯ

## ಆತ್ಮಸ್ಥೈರ್ಯ



ಘನತತ್ವವೊಂದಕ್ಕೆ ದಿನರಾತ್ರಿ ಮನಸೋತು

ನೆನೆಯದಿನ್ನೊಂದೆನೆಲ್ಲವ ನೀಡುತದರಾ

ಅನುಸಂಧಿಯಲಿ ಜೀವಭಾರವನು ಮರೆಯುವುದು

ಹನುಮಂತನುಪದೇಶ- ಮಂಕುತಿಮ್ಮ

ಎಂಬ ಡಿವಿಜಿಯವರ ಮಾತು ನಮ್ಮ ಏಕಾಗ್ರತೆಗೆ ಸೂಕ್ತವಾದದ್ದು. ಏಕಾಗ್ರತೆಯಿದ್ದರೆ ಮಾತ್ರ ಮನಸ್ಸಿನ ನಿಗ್ರಹ ಸಾಧ್ಯ. ಮನಸ್ಸಿನ ನಿಗ್ರಹವೇ ಆತ್ಮ ಸ್ಥೈರ್ಯ. ಸ್ಥೈರ್ಯಕ್ಕೆ ದಾರಿ: ಆನಂದ ಪಡುವುದೇ ಆತ್ಮದ ಸಹಜಗುಣ. ನಮ್ಮೊಂದಿಗೆ ನಾವು ಪ್ರಾಮಾಣಿಕರಾಗಿದ್ದಾಗ ಮಾತ್ರ ಆತ್ಮಾಭಿಮಾನ ಬೆಳೆಯಲು ಸಾಧ್ಯ. ಆತ್ಮಾಭಿಮಾನವೇ ಆತ್ಮವಿಶ್ವಾಸವನ್ನು ನೀಡಿ ಆತ್ಮಸ್ಥೈರ್ಯ ನೀಡುವಂತದ್ದು.

ಈಗ ಮನುಷ್ಯನ ಜೀವನ ಸರಾಸರಿ 75-80ಕ್ಕೆ ಸೀಮಿತವಾಗಿದೆ. ಅದರಲ್ಲೂ ಯುವಕರೂ 45-60ರ ಆಸುಪಾಸಿನಲ್ಲಿ ಹೃದಯಾಘಾತದಿಂದ ಸಾವನ್ನಪ್ಪುವುದು ಕಾಣುವಾಗ ನಿಜವಾಗಿಯೂ ಬೇಸರವಾಗುತ್ತಿದೆ. ಇದಕ್ಕೆ ಕಾರಣ ನಮ್ಮ ಜೀವನಶೈಲಿ. ಅತೀಯಾದ ಹಂಬಲ, ಒತ್ತಡ ಎಲ್ಲವೂ ಕಾರಣ.

ಮಕ್ಕಳಲ್ಲಿ ಗಮನಿಸಿದಾಗ, ನಗರದ ಮಕ್ಕಳಿಗೆ ಹೋಲಿಸಿದರೆ ಗ್ರಾಮೀಣ ಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚು. ಯಾಕೆಂದರೆ ಅಲ್ಲಿ ಮಕ್ಕಳು ಚಿಕ್ಕಂದಿನಲ್ಲಿ ಮನೆಯಿಂದ ಹೊರಗೆ ಹೋಗಿ ಆಟವಾಡಿ ಪ್ರಕೃತಿಯೊಂದಿಗೆ ಬೆರೆತು ನಲಿಯುತ್ತಾರೆ. ಇದರೊಂದಿಗೆ ಹೆತ್ತವರು ಮತ್ತು ಮಕ್ಕಳಲ್ಲಿ ಒಂದು ಸಾಮ್ಯತೆ ಇರುತ್ತದೆ. ಹಾಗೆ ಮಕ್ಕಳನ್ನು ಧೈರ್ಯವಂತರಾಗಿರಲು ಹುರಿದುಂಬಿಸುತ್ತಾರೆ. ಆದರೆ ನಗರದಲ್ಲಿ ಮಕ್ಕಳಿಗೆ ಅವಕಾಶ ಇರುವುದಿಲ್ಲ. ವಿದ್ಯಾರ್ಥಿಗಳಾಗಿರುವಾಗಲೇ ಮಕ್ಕಳಿಗೆ ಶಾಲೆಯ ಪಾಠದ ಜೊತೆಜೊತೆಗೆ 4-5 ಎಕ್ಸ್ಟ್ರಾ ತರಗತಿಗಳು ಇರುತ್ತವೆ. ಇದರಿಂದ ಅತೀಯಾದ ಒತ್ತಡವಿರುತ್ತದೆ. ಮಿತಿಯಾದ ಸಮಯದಲ್ಲಿ ಅತಿಯಾದ ಒತ್ತಡವನ್ನು ಎದುರಿಸಲು ಸಾಧ್ಯವಾಗದೇ ಮಕ್ಕಳು ಕುಗ್ಗಿಹೋಗುತ್ತಾರೆ. ಆಗಲೇ ಆತ್ಮಸ್ಥೈರ್ಯ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು.

ಮುಷ್ಟಿಯಷ್ಟಿರುವ ಹೃದಯಕ್ಕೆ ಒತ್ತಡವು ಹೆಚ್ಚಾದಾಗಲೇ ಡಿಪ್ರೆಷನ್‌ನಂತಹ ಕಾಯಿಲೆಗೆ ಒಳಗಾಗುವುದು, ಅವಧಿಯಲ್ಲಿ ಯಾವುದನ್ನು ಮಾಡಲಾಗದೇ ಮನಸ್ಸು ಕುಗ್ಗಿಹೋಗುವುದು. ಹಾಗಾಗಿ ನಮ್ಮಲ್ಲಿ ಒಂದು ಗುರಿ ಚಿಕ್ಕಂದಿನಲ್ಲಿಯೇ ಬೆಳೆಸಿಕೊಂಡರೆ ಮತ್ತು ನಮ್ಮ ಚಿತ್ತ ಅದರೆಡೆಗೆ ಇದ್ದರೆ ಮಾತ್ರ ಸಾಧನೆ ಸುಲಭವಾಗುವುದು.

ಕೊರೋನಾ ಸಮಯದಲ್ಲಿ ಕೊರೋನಾಕ್ಕಿಂತ ಹೆಚ್ಚಾಗಿ ಆತ್ಮಸ್ಥೈರ್ಯ ಕಳೆದುಕೊಂಡು ಸತ್ತವರೇ ತುಂಬಾ ಜನ. ಆಗ ಕೋವಾಕ್ಸಿನ್ ಎಂಬುದು ಜನರಿಗೆ ಆತ್ಮಸ್ಥೈರ್ಯವನ್ನು ತುಂಬಿದ ಅಮೃತವಾಗಿತ್ತು. ನಮ್ಮ ಸಂಪ್ರದಾಯದಲ್ಲಿ "ದೇವಸ್ಥಾನ" ಎಂಬುದು ಆತ್ಮಸ್ಥೈರ್ಯ ತುಂಬುವ ಮೂಲಕೇಂದ್ರವಾಗಿದೆ. ದೇವರು, ದೈವಗಳು ನಮಗೆ ಬೆನ್ನಿಗೆ ಸಹಾಯವಾಗಿ ನಿಂತಿದ್ದಾರೆ ಎಂಬ ಮಾತೇ ನಮಗೆ ಧೈರ್ಯ ನೀಡುವಂತದ್ದು. ಅಸಾಧ್ಯವಾದುದನ್ನೇ ಸಾಧ್ಯವಾಗಿಸುವುದು ಅದೇ ನಂಬಿಕೆ.

ದೇವಸ್ಥಾನಗಳಿಗೆ ಹೋಗುವ ಅಭ್ಯಾಸವೂ ಸಂಸ್ಕಾರದ ಜೊತೆಗೆ ನಮಗೆ ಪಾಸಿಟಿವ್ ಎನರ್ಜಿ ಕೊಡುವಂತದ್ದು. "ನಮ್ಮ ಸನಾತನ ಧರ್ಮ ಸದಾ ಸ್ಥೈರ್ಯ ತುಂಬುವ ಸಾಧನ".

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



ನಮ್ಮ ಆಡಳಿತ ಮಂಡಳಿಯ ತಂಡ ಬೆಂಗಳೂರು ಬಂಟರ ಸಂಘದ ಚುಕ್ಕಾಣಿ ಹಿಡಿಯಲು ಆಯ್ಕೆಯಾಗಿ ಬರುವಾಗ ಸದಸ್ಯರಿಗೆ ಕೆಲವೊಂದು ಭರವಸೆಗಳನ್ನು ನಾವು ನೀಡಿದ್ದೆವು. ಕೆಲವೊಂದು ಯೋಜನೆಗಳು ನಮ್ಮ ಮನಸ್ಸಿನಲ್ಲಿದ್ದು, ಅದಕ್ಕೆ ಪೂರಕವಾಗಿ ಅನೇಕ ಕೆಲಸಗಳು ನಡೆದಿವೆ. ಆದರೆ ನಾವು ಮಾಡಬೇಕಾಗಿರುವ ಬಹು ಮುಖ್ಯವಾದ ಕೆಲಸ ಏನೆಂದರೆ ಪಾರದರ್ಶಕವಾದ ಆಡಳಿತ ನೀಡುವುದು.

ಈ ಹಿಂದೆ ಅನೇಕ ಹಿರಿಯರು ಹಾಗೂ ಮಹಾಪುರುಷರು ಬಹುದೊಡ್ಡ ನಿರೀಕ್ಷೆ ಹಾಗೂ ದೂರದೃಷ್ಟಿಯನ್ನಿಟ್ಟುಕೊಂಡು ಈ ಸಂಘವನ್ನು ಹುಟ್ಟುಹಾಕಿ ಬೆಳೆಸಿದರು. ಅದೇ ರೀತಿಯಾಗಿ ಭಗವಂತ ಅನೇಕ ನಿಷ್ಠಾವಂತ ದಾನಿಗಳನ್ನು ಈ ಸಂಘಕ್ಕೆ ಕಳುಹಿಸಿ ಅವರಿಂದ ದಾನರೂಪವಾಗಿ ಸಂಗ್ರಹವಾದ ಹಣದಲ್ಲಿ ನಮ್ಮ ಸಭಾಭವನ, ಶಾಲೆ, ಆಡಳಿತ ಕಛೇರಿ ಕಟ್ಟಡ ಇತ್ಯಾದಿಗಳ ನಿರ್ಮಾಣವಾಯಿತು. ಬಹುಮುಖ್ಯವಾಗಿ ಶ್ರೀ ಎಚ್.ಟಿ. ಭಂಡಾರಿಯವರು ವಿಜಯನಗರ ಸಂಕೀರ್ಣದ ಜಾಗವನ್ನು ದಾನವಾಗಿ ನೀಡಿದ್ದರು. ನಂತರ ಶ್ರೀಯುತರಾದ ಕೆ. ಪಿ. ರಾಮಣ್ಣ ಶೆಟ್ಟಿ, ಶ್ರೀ ಆರ್.ಎನ್. ಶೆಟ್ಟಿ, ಶ್ರೀ ಬಿ.ಆರ್. ಶೆಟ್ಟಿ, ಶ್ರೀ ಪ್ರಕಾಶ್ ಶೆಟ್ಟಿ ಹೀಗೆ ಅನೇಕ ಮಹನೀಯರು ತಮ್ಮ ಉದಾರ ದಾನದಿಂದ ಸಂಘದ ಒಂದೊಂದೇ ಕಟ್ಟಡ, ಶಾಲೆಗಳ ನಿರ್ಮಾಣವಾಯಿತು. ಇಲ್ಲಿ ನಾವು ಎಲ್ಲಾ ದಾನಿಗಳನ್ನು ಸ್ಮರಿಸಬೇಕಾಗಿದೆ. ದೊಡ್ಡ ಅಥವಾ ಸಣ್ಣ ಮೊತ್ತವಾಗಿರಲಿ ದಾನ ದಾನವೇ ಅಲ್ಲವೇ?

ಆದರೆ ಇವರೆಲ್ಲರ ಭಾವನೆಗಳಿಗೆ ಇಂದು ನಾವು ಸ್ಪಂದಿಸುತ್ತಿದ್ದೇವೆಯೇ ಎಂಬುದು ಈಗ ಪ್ರಶ್ನೆಯಾಗಿ ಮೂಡತೊಡಗಿದೆ. ಇಂತಹ ಮಹತ್ತರ ಉದ್ದೇಶದಿಂದ ನಿರ್ಮಿತವಾದ ಈ ಸಂಘದಿಂದ ಬೇರೆ ಬೇರೆ ವಿಧಾನಗಳಿಂದ ಹಣದ ದುರುಪಯೋಗ ಆಗುತ್ತಿರುವುದು ನಮ್ಮ ಗಮನಕ್ಕೆ ಬಂದಾಗ ನಮ್ಮೆಲ್ಲರಿಗೂ ಬಹಳ ದೊಡ್ಡ ಆಘಾತವೇ ಆದಂತಾಯಿತು. ಇಲ್ಲಿ ಯಾರ ಮನಸ್ಸಿಗೆ ನೋವುಂಟು ಮಾಡುವ ಅಥವಾ ಯಾರನ್ನಾದರೂ ನಿಂದಿಸುವ ಉದ್ದೇಶ ನಮ್ಮದಲ್ಲ. ಸಂಘದ ಹಣ ಕಷ್ಟದಲ್ಲಿರುವವರ ಸೇವೆಗಾಗಿ ಉಪಯೋಗವಾಗಬೇಕೇ ವಿನಹಃ ಹಣದ ದುರುಪಯೋಗ ಮಾಡುವವರ ಕೈಸೇರಬಾರದು. ಹಾಗಾಗಿ ಒಂದಂತೂ ಸ್ಪಷ್ಟವಾಗಿ ಹೇಳಲಿಚ್ಚಿಸುತ್ತೇನೆ, ವೈಯಕ್ತಿಕವಾಗಿ ನಮಗೆ ಯಾರ ಮೇಲೂ ದ್ವೇಷವಿಲ್ಲ. ನಮ್ಮ ಏಕೈಕ ಉದ್ದೇಶವೆಂದರೆ ಪಾರದರ್ಶಕವಾಗಿ ಆಡಳಿತ ನೀಡಿ, ಸಂಘದ ಉದ್ದೇಶವನ್ನು ಮನದಲ್ಲಿರಿಸಿಕೊಂಡು ನಮ್ಮ ಆ ಹಿರಿಯರ ಮನಸ್ಸಿಗೋ, ಆತ್ಮಕ್ಕೋ ತೃಪ್ತಿ ಸಿಗುವಂತಹ ಕೆಲಸಗಳಾಗಬೇಕು.

ಒಮ್ಮೊಮ್ಮೆ ಸಂಘ ಸಂಸ್ಥೆಗಳಲ್ಲಿ ಕೆಟ್ಟ ಸನ್ನಿವೇಶಗಳು ಬರುತ್ತವೆ. ಆದರೆ ನಮಗೆ ಯಾಕೆ ಎಂದು ಸುಮ್ಮನಿದ್ದರೆ ಭಗವಂತ ನಮ್ಮನ್ನು ಮೆಚ್ಚುವನೇ? ಇಂತಹ ಕಠಿಣ ಸಂದರ್ಭಗಳನ್ನು ಎದುರಿಸಬೇಕಾಗುತ್ತದೆ. ಎಲ್ಲಾ ಬಗೆಯ ಬಿರುಗಾಳಿ ಬದುಕನ್ನು ಹಾಳುಮಾಡಲೆಂದೇ ಬರುವುದಿಲ್ಲ. ಕೆಲವೊಂದು ನಿಮ್ಮ ದಾರಿಯನ್ನು ಸ್ವಚ್ಛಗೊಳಿಸಲಿಕ್ಕೂ ಬರಬಹುದು.

ಸಂಘದ ಇತ್ತೀಚಿನ ಕೆಲವು ಬೆಳವಣಿಗೆಗಳು ಅನೇಕ ಸದಸ್ಯರಿಗೆ ಬೇಸರವನ್ನುಂಟುಮಾಡಿರಬಹುದು. ಆದರೆ ಇದನ್ನು ಸರಿಪಡಿಸಿಕೊಂಡು ಮುನ್ನಡೆಯುವ ಜವಾಬ್ದಾರಿ ನಮ್ಮ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರದ್ದು. ಆದ್ದರಿಂದ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುತ್ತಾ, ನಮ್ಮ ಅವಧಿಯಲ್ಲಿ ಇನ್ನು ಉಳಿದಿರುವ ಕೆಲವು ತಿಂಗಳುಗಳಲ್ಲಿ ಸಾಧ್ಯವಾದಷ್ಟು ಉತ್ತಮ ಕೆಲಸಗಳನ್ನು ನಾವು ಮಾಡುವಂತಾಗಲಿ, ಸರ್ವ ಸದಸ್ಯರ ಪ್ರೋತ್ಸಾಹ ನಮಗಿರಲಿ, ನಮ್ಮ ನಿಮ್ಮೆಲ್ಲರ ಪವಿತ್ರ ದೇವಾಲಯದಂತಿರುವ ನಮ್ಮ ಬೆಂಗಳೂರು ಬಂಟರ ಸಂಘ ಎಲ್ಲರ ಪ್ರಶಂಸೆಗೆ ಪಾತ್ರವಾಗಿ ಇದೊಂದು ಅತ್ಯುತ್ತಮ ಸಂಘ ಎಂಬ ಭಾವನೆ ಎಲ್ಲರಲ್ಲಿ ಮೂಡಲಿ ಎಂದು ಸಂಘದ ಅದಿದೇವತೆಯಾದ ಶ್ರೀ ವರಸಿದ್ಧಿ ವಿನಾಯಕನಲ್ಲಿ ಪ್ರಾರ್ಥಿಸುತ್ತೇನೆ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು
hegdemm@gmail.com

# ಗೌರವ ಕಾರ್ಯದರ್ಶಿಯವರ ವರದಿ



ದಿನಾಂಕ 10.11.2023ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಆವರಣದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಡಾ. ಎಚ್. ಎಸ್. ಗಣೇಶ್ ಭಟ್ಟ್ ಭಾಗವಹಿಸಿದ್ದರು. ದಿನಾಂಕ 11.11.2023ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಬಿ.ಆರ್. ಲಕ್ಷ್ಮಣರಾವ್ ರವರು ಭಾಗವಹಿಸಿದ್ದರು.

ದಿನಾಂಕ 18.11.2023ರಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ದೀಪಾವಳಿಯನ್ನು ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರಕಾರದ ಮಾಜಿ ಸಚಿವರು, ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎಂ. ಕೃಷ್ಣಪ್ಪನವರು ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು, ಮಾಜಿ ಲೋಕಸಭಾ ಸದಸ್ಯರು ಹಾಗೂ ಕರ್ನಾಟಕ ಸರಕಾರದ ಮಾಜಿ ಸಚಿವರಾದ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಹರೀಶ್ ಪೂಂಜ ಇವರಿಗೆ "ದಿ. ಡಾ. ಜೀವರಾಜ್ ಆಳ್ವ ಸದ್ಭಾವನಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ದೀಪಾವಳಿಯ ಸಂಪ್ರಾದಾಯಿಕ ಆಚರಣೆಗಳನ್ನು ಹಾಗೂ ನಾರಸಿಂಹ ನೃತ್ಯ ರೂಪಕವನ್ನು ಆಯೋಜಿಸಿದಂತಹ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕರಾದ ಶ್ರೀ ಮಹೇಶ್ ಶೆಟ್ಟಿ ಬೈಲೂರು ಹಾಗೂ ತಂಡದ ಎಲ್ಲಾ ಸದಸ್ಯರಿಗೂ ಅಭಿನಂದನೆಗಳು.

ದಿನಾಂಕ 18.11.2023ರಂದು ಬಂಟರ ಸಂಘ ಆರ್.ಎನ್.ಎಸ್. ಸಂಜೆ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ತುಮಕೂರಿನ 3s products and Services ಗೆ ಇಂಡಸ್ಟ್ರೀಸ್ ವಿಸಿಟ್‌ನ್ನು ಏರ್ಪಡಿಸಲಾಗಿತ್ತು. ಸಂಸ್ಥೆಯ ಶ್ರೀ ನರೇಂದ್ರ ಶೆಟ್ಟಿಯವರಿಗೆ ತುಂಬು ಹೃದಯದ ಧನ್ಯವಾದಗಳು.

ದಿನಾಂಕ 27.11.2023ರಂದು ಬಂಟರ ಸಂಘ ಆರ್.ಎನ್.ಎಸ್. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ "ಸ್ಫೂರ್ತಿ" ಕಾರ್ಯಕ್ರಮದಡಿಯಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರು ಮತ್ತು ಡೀನ್ ಡಾ. ರಮೇಶ್ ಕೃಷ್ಣರವರು ಆಗಮಿಸಿದ್ದರು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಅಂಗವಾಗಿ ದಿನಾಂಕ 05.11.2023ರಂದು ಚೆಸ್, ಕೇರಂ ಹಾಗೂ ಟೆನ್ನಿಕ್ವಾಟ್ ಮತ್ತು ದಿನಾಂಕ 03.12.2023ರಂದು ತ್ರೋಬಾಲ್ ಮತ್ತು ವಾಲಿಬಾಲ್ ಪಂದ್ಯಾಟವನ್ನು ಬಂಟರ ಸಂಘದ ಸಂಕೀರ್ಣದಲ್ಲಿ ಆಯೋಜಿಸಲಾಗಿತ್ತು. ಈ ಎಲ್ಲಾ ಸ್ಪರ್ಧೆಗಳಲ್ಲಿ ಸಂಘದ ಸದಸ್ಯರು ಮತ್ತು ಅವರ ಮಕ್ಕಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದಂತಹ ಕ್ರೀಡಾ ಸಮಿತಿಯ ಚೇರ್‌ಪರ್ಸನ್ ಶ್ರೀ ಕಿರಣ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ನಿತ್ಯರಂಜನ್ ಹೆಗ್ಡೆ ಮತ್ತು ತಂಡಕ್ಕೆ ಅಭಿನಂದನೆಗಳು. ಕ್ರೀಡಾ ಕೂಟಕ್ಕೆ ಸಹಕರಿಸಿದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು IIರ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳು.

ಇಂತಿ ತಮ್ಮ ಪ್ರೀತಿಯ,

**ಬಿ. ಆನಂದರಾಮ ಶೆಟ್ಟಿ**

ಗೌರವ ಕಾರ್ಯದರ್ಶಿ

# ಸಾರ್ವಕಾಲಿಕ ಸತ್ಯಗಳಾದ ಷೇಕ್ಸ್‌ಪಿಯರ್ ಉಲ್ಲೇಖಗಳು



ಚೇರ್ಕಾಡಿ
ಸಚ್ಚಿದಾನಂದ ಶೆಟ್ಟಿ

ವಿಲಿಯಂ ಷೇಕ್ಸ್‌ಪಿಯರ್ (23-04-1564 ರಿಂದ 23-04-1616) ಇಂಗ್ಲೀಷ್‌ನಲ್ಲಿ ಬರೆದರೂ, ಭಾರತವೂ ಸೇರಿದಂತೆ, ವಿಶ್ವದ ಯಾವ ದೇಶ, ಭಾಷೆ, ಸಂಸ್ಕೃತಿಯೂ ಷೇಕ್ಸ್‌ಪಿಯರ್‌ನ ಪ್ರಭಾವದಿಂದ ಹೊರತಾಗಿಲ್ಲ. ಏಕೆಂದರೆ ಷೇಕ್ಸ್‌ಪಿಯರ್‌ನ ಉಕ್ತಿಗಳು ಎಲ್ಲ ಕಾಲಗಳಿಗೂ, ಎಲ್ಲ ಸಂದರ್ಭಗಳಿಗೂ ಪ್ರಸ್ತುತ. ಷೇಕ್ಸ್‌ಪಿಯರ್‌ನ ಏಕಸಾಲಿನ ನಾಣ್ಣುಡಿಗಳ ವ್ಯಾಪ್ತಿ ಮತ್ತು ವಿಸ್ತಾರ ಎಷ್ಟರ ಮಟ್ಟಿಗೆ ಎಂದರೆ, ಯಾವುದೇ ಸಂದರ್ಭದಲ್ಲಿ ಯಾವುದಾದರೂ ಬುದ್ಧಿವಂತ ಹೇಳಿಕೆ ಯಾರದ್ದೆಂದು ನೆನಪಿಗೆ ಬಾರದಿದ್ದಾಗ, ನೀವು ಇದು ಷೇಕ್ಸ್‌ಪಿಯರ್ ಹೇಳಿದ್ದಿರಬಹುದು! ಎಂದು ಊಹಿಸಿದರೆ, ನಮ್ಮ ಊಹೆ ಸರಿಯಾಗಿರುವ ಸಾಧ್ಯತೆಯೇ ಹೆಚ್ಚು. ಷೇಕ್ಸ್‌ಪಿಯರ್ ಅದನ್ನು ಎಲ್ಲಿಯಾದರೂ ಹೇಳಿಯೇ ಹೇಳಿರುತ್ತಾನೆ.

ಷೇಕ್ಸ್‌ಪಿಯರ್‌ನನ್ನು ಓದಿ ಜೀರ್ಣಿಸಿಕೊಂಡವರು ಬಹಳ ಕಡಿಮೆ ಮಂದಿ. ಆದರೆ ಷೇಕ್ಸ್‌ಪಿಯರ್‌ನ ಅಮರ ಸಾಲುಗಳನ್ನು ಉಲ್ಲೇಖಿಸುವವರು, ನಮ್ಮ ನಿಮ್ಮಂತಹ ಎಲ್ಲರೂ! ಇದಕ್ಕೆ ಕಾರಣ ಸುಲಭ. ಷೇಕ್ಸ್‌ಪಿಯರ್‌ನ ಸಾವಿರಾರು ಸಾಲುಗಳಲ್ಲಿ ಬಹುತೇಕ ಎಲ್ಲಕ್ಕೂ, ಯಾವುದೇ ಕಥೆ ಅಥವಾ ಪಾತ್ರದ ಆಧಾರವಿಲ್ಲದೆ ನಿಲ್ಲುವ ಶಕ್ತಿ ಇರುವುದು.

'ಷೇಕ್ಸ್‌ಪಿಯರ್‌ನ ಹುಟ್ಟು ಹಬ್ಬದ ಸಂದರ್ಭದಲ್ಲಿ ಆತನ ಕೆಲವು ಉಕ್ತಿಗಳನ್ನು ಕಂಡದ್ದು ಬೇರೆಯದೇ ಹೊಳಹು! ಅರೆ! ಷೇಕ್ಸ್‌ಪಿಯರ್‌ನ ಅದೆಷ್ಟೋ ಉಕ್ತಿಗಳು ಇಂದಿನ ಡಿಜಿಟಲ್/ಸಾಮಾಜಿಕ ಮಾಧ್ಯಮಗಳಲ್ಲಿ ಜನರ ವರ್ತನೆಯ ಕುರಿತಾಗಿಯೇ ಹೇಳಿರುವಂತಿದೆ! ಇತರರೊಡನೆ ವ್ಯವಹರಿಸುವ ವೇದಿಕೆಗಳು ಬದಲಾಗಿವೆಯಾದರೂ ನಮ್ಮ ಬುದ್ಧಿ ಮತ್ತು ನಡವಳಿಕೆಗಳು ಬದಲಾಗಿಲ್ಲ! ನೀವು ಈ ಸಾಲುಗಳಿಗೆ ಆರೋಪಿಸುವ ಸಂದರ್ಭ/ಕುಳಿಹ/context ಎಂಥದ್ದೇ ಆಗಿರಲಿ ಷೇಕ್ಸ್‌ಪಿಯರ್ ಹುಡುಕಿದಷ್ಟೂ, ಹಿಂಡಿದಷ್ಟೂ, ಹೊರಳಿದಷ್ಟೂ ಇನ್ನಷ್ಟು ದೊರಕುವ ಬೆರಗು ನಾಲ್ಕೂವರೆ ಶತಮಾನಗಳ ನಂತರವೂ, ಅಷ್ಟೇ ಸ್ಪಷ್ಟ ಅಷ್ಟೇ ಪ್ರಸ್ತುತ. ಉದಾಹರಣೆಗೆಂಬಂತೆ, ನೀವೇ ನೋಡಿ, ಈತನ ಉಕ್ತಿಗಳು ಇಂದಿನ 'ಸಾಮಾಜಿಕ ಮಾಧ್ಯಮಗಳಲ್ಲಿನ ಜನರ ನಡವಳಿಕೆ'ಗೆ ಪ್ರಸ್ತುತವಾಗಿರುವ ವೈಚಿತ್ರವನ್ನು:

- ನರಕವೆಂಬುದು ಖಾಲಿಯಾಗಿದೆ. ಏಕೆಂದರೆ, ಭೂತಗಳೆಲ್ಲವೂ ಇಲ್ಲಿಯೇ ಇವೆ.
- ದೇವರು ನಿಮಗೆ ಒಂದು ಮುಖವನ್ನು ಕೊಟ್ಟಿದ್ದಾನೆ. ನೀವು ಮತ್ತೊಂದನ್ನು ಸೃಷ್ಟಿಸಿಕೊಳ್ಳುತ್ತೀರಿ.
- ರಾತ್ರಿ ಕಳೆದು ಹಗಲಾಗುವಷ್ಟೇ ದಿಟವಾಗಿ ನಮಗೆ ನಾವು ಸತ್ಯವಾಗಿದ್ದರೆ, ನಾವು ಬೇರೆಯವರಿಗೆ ತಪ್ಪಾಗಿ/ಅನುಮಾನಾಸ್ಪದವಾಗಿ ಕಾಣಲು ಸಾಧ್ಯವಿಲ್ಲ.
- ಎಲ್ಲರನ್ನೂ ಪ್ರೀತಿಸಿ. ಕೆಲವರನ್ನ ನಂಬಿ. ಯಾರಿಗೂ ಅನ್ಯಾಯವೆಸಗದಿರಿ.
- ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆಯೇ ಹೊರತು ನಕ್ಷತ್ರಗಳಲ್ಲಿಲ್ಲ.
- ನೀವು ನಮಗೆ ಚುಚ್ಚಿದರೆ ನಮಗೆ ರಕ್ತ ಬರುವುದಿಲ್ಲವೇ? ನಮಗೆ ಕಚಗುಳಿ ಇಟ್ಟರೆ ನಗು ಬರುವುದಿಲ್ಲವೇ? ವಿಷವಿತ್ತರೆ ಸಾಯುವುದಿಲ್ಲವೇ? ಹಾಗೆಯೇ, ನೀವು ನಮ್ಮ ಮೇಲೆ ಅನ್ಯಾಯವೆಸಗಿದರೆ, ನಾವು ಸೇಡು ತೀರಿಸಿಕೊಳ್ಳುವುದಿಲ್ಲವೇ?
- ಇಡೀ ವಿಶ್ವವೇ ವೇದಿಕೆ, ಅದರಲ್ಲಿರುವ ಗಂಡಸರು ಹೆಂಗಸರೆಲ್ಲ ಪಾತ್ರಧಾರಿಗಳು. ಅವರಿಗೆ ಅವರದ್ದೇ ಆದ ಪ್ರವೇಶ-ನಿರ್ಗಮನಗಳಿವೆ. ಹಾಗೂ ಓರ್ವ ಮನುಷ್ಯ ತನ್ನ ಜೀವಿತಕಾಲದಲ್ಲಿ ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾನೆ.
- ಕೆಲವರು ಶ್ರೇಷ್ಠರಾಗಿ ಹುಟ್ಟುತ್ತಾರೆ, ಮತ್ತೆ ಕೆಲವರು ಶ್ರೇಷ್ಠತೆಯನ್ನು ಸಾಧಿಸುತ್ತಾರೆ, ಮತ್ತೆ ಕೆಲವರ ಮೇಲೆ ಶ್ರೇಷ್ಠತೆಯನ್ನು ಹೇರಲಾಗುತ್ತದೆ.
- ಮೌಢ್ಯವೆನ್ನುವುದು ದೇವರು ಕೊಟ್ಟ ಶಾಪ. ಜ್ಞಾನವೆಂಬ ರೆಕ್ಕೆ ಇದ್ದರೆ ನಾವು ಸ್ವರ್ಗಕ್ಕೆ ಹಾರಬಹುದು.
- ಹೇಡಿಗಳು ತಮ್ಮ ಸಾವಿಗೆ ಮುನ್ನ ನೂರು ಬಾರಿ ಸಾಯುತ್ತಾರೆ; ವೀರರು ಒಮ್ಮೆ ಮಾತ್ರ ಸಾಯುತ್ತಾರೆ.

- ಕಳ್ಳ ಮನಸ್ಸನ್ನು ಯಾವಾಗಲೂ ಅನುಮಾನ ಕಾಡುತ್ತದೆ.
- ಒಳ್ಳೆಯದು ಅಥವಾ ಕೆಟ್ಟದ್ದು ಎಂಬುದು ಯಾವುದೂ ಇಲ್ಲ. ನಮ್ಮ ಆಲೋಚನೆಗಳು ಒಳ್ಳೆಯದು ಕೆಟ್ಟದ್ದನ್ನು ನಿರ್ಧರಿಸುತ್ತವೆ.
- ಪೆದ್ದ–ಜಾಣನಾಗಿರುವುದಕ್ಕಿಂತ ಜಾಣ–ಪೆದ್ದನಾಗಿರುವುದು ಲೇಸು.
- ಮನುಷ್ಯರು ಕೆಟ್ಟದ್ದು ಮಾಡಿದರೆ, ಅದು ಅವರು ಅಳಿದ ನಂತರವೂ ಉಳಿಯುತ್ತದೆ. ಒಳ್ಳೆಯದು ಸಾಮಾನ್ಯವಾಗಿ ಅವರ ಮೂಳೆಗಳೊಂದಿಗೆ ಹೂಳಲ್ಪಡುತ್ತದೆ.
- ಪ್ರಾಮಾಣಿಕತೆಗಿಂತ ಮಿಗಿಲಾದ ಆಸ್ತಿಯಿಲ್ಲ.
- ಸಂತೋಷದಲ್ಲಿ ಮತ್ತು ನಗುವಿನಲ್ಲಿ ನಮಗೆ ವಯಸ್ಸಾಗಿ ಮುಖದ ಮೇಲಿನ ಸುಕ್ಕುಗಳು ಮೂಡಲಿ.
- ಹೆಸರಿನಲ್ಲೇನಿದೆ? ನಾವು ಯಾವುದನ್ನು ಗುಲಾಬಿ ಎಂದು ಕರೆಯುತ್ತೇವೆಯೋ ಅದನ್ನು ಬೇರಾವ ಹೆಸರಿನಿಂದ ಕರೆದಿದ್ದರೂ, ಅಷ್ಟೇ ಪರಿಮಳವನ್ನು ಸೂಸುತ್ತಿತ್ತು.
- ಇನ್ನೊಬ್ಬನ ದೃಷ್ಟಿಯಿಂದ ಸಂತೋಷವನ್ನು ನೋಡುವುದು ಅದೆಂತಹ ಕಹಿ ಅನುಭವ!
- ನಮ್ಮ ಅನುಮಾನಗಳು ನಮಗೆ ದ್ರೋಹ ಬಗೆಯುತ್ತವೆ. ನಾವು ಗೆಲ್ಲಲು ಯಾವ ಪ್ರಯತ್ನ ಮಾಡಬೇಕೋ, ಅದನ್ನು ಮಾಡದಂತೆ ಹೆದರಿಸುತ್ತವೆ.
- ಖಾಲಿ ತಪ್ಪಲೆಗಳು ಅತಿ ಹೆಚ್ಚು ಶಬ್ದವನ್ನು ಮಾಡುತ್ತವೆ.
- ತನ್ನ ಕಾರ್ಯ ಸಾಧನೆಗಾಗಿ ಧೂರ್ತನೂ ಶಾಸ್ತ್ರಗಳನ್ನು ಉಲ್ಲೇಖಿಸುತ್ತಾನೆ.
- ಪ್ರೀತಿ ಎನ್ನುವುದು ನಿಟ್ಟುಸಿರುಗಳಿಂದ ಕೂಡಿದ ಹೊಗೆ.
- ಗಂಡಸರು ಸಶಕ್ತರಾಗಿರದಿದ್ದಾಗ ಹೆಂಗಸರು ಬೀಳುತ್ತಾರೆ.
- ತುಂಬಿ ಹರಿಯುವ ಒಳ್ಳೆಯತನ ಕೆಡುಕಿಗೆ ಎಡೆಮಾಡಿಕೊಡುತ್ತದೆ.
- ನಕಲಿ ಹೃದಯಕ್ಕೆ ಏನು ಗೊತ್ತೋ ಅದನ್ನು ನಕಲಿ ಮುಖ ಮರೆಮಾಚಬೇಕು.
- ಮಾತು ಕೃತಿಯಲ್ಲ. ಒಳ್ಳೆಯದನ್ನು ನುಡಿಯುವುದು ಸತ್ಕಾರ್ಯವೇ ಆದರೂ, ಮಾತಿಗೂ ಕೃತಿಗೂ ವ್ಯತ್ಯಾಸವಿದೆ.
- ನಾವು ಏನೆಂಬುದು ನಮಗೆ ಗೊತ್ತು. ಆದರೆ, ನಾವು ಏನಾಗಬಲ್ಲವೋ ನಮಗೆ ಗೊತ್ತಿಲ್ಲ.
- ಶಾಂತಿಗೂ ದಿಗ್ವಿಜಯಕ್ಕೂ ಸಾಮ್ಯವಿದೆ. ಏಕೆಂದರೆ ಎರಡರಲ್ಲೂ ಎರಡು ಪಂಗಡದವರು ಉದಾತ್ತವಾಗಿ ಮಂದವಾಗಿರುತ್ತಾರೆ. ಹಾಗೂ ಯಾರಿಗೂ ಗೆಲವು–ಸೋಲೆಂಬುದು ಇರುವುದಿಲ್ಲ.
- ಆಲೋಚನೆ ಇರದ ಮಾತುಗಳು ಎಂದಿಗೂ ಸ್ವರ್ಗವನ್ನು ಸೇರುವುದಿಲ್ಲ.
- ಜೀವನವೆನ್ನುವುದು ಎರಡನೆಯ ಬಾರಿ ಕೇಳುತ್ತಿರುವ ಕಥೆಯಂತೆ ನಿದ್ದೆ ಬರುತ್ತಿರುವ ವ್ಯಕ್ತಿಯ ಮಂದವಾದ ಕಿವಿಗೆ ಕಿರಿಕಿರಿಯುಂಟು ಮಾಡುತ್ತದೆ.
- ಮನುಷ್ಯ ತನ್ನ ಇಳಿ ವಯಸ್ಸಿನಲ್ಲಿ ಸಹಿಸಿಕೊಳ್ಳಲಾಗದ ಮಾಂಸವನ್ನು ತನ್ನ ಪ್ರಾಯದಲ್ಲಿ ಇಷ್ಟ ಪಟ್ಟಿರುತ್ತಾನೆ.
- ಇಂತಹ ಮೂರ್ಖರಿರುವ ರಂಗ ಭೂಮಿಗೆ ಬಂದೆವಲ್ಲಾ ಎಂದು ನಾವು ಹುಟ್ಟಿದಾಗ ಅಳುತ್ತೇವೆ.
- ಅಜ್ಞಾನಕ್ಕೂ ಮಿಗಿಲಾದ ಕತ್ತಲಿಲ್ಲ.
- ಮೀನುಗಳು ಸಮುದ್ರದಲ್ಲಿ ಜೀವಿಸುವಂತೆ ಮನುಷ್ಯರು ಭೂಮಿಯ ಮೇಲೆ ಜೀವಿಸುತ್ತಾರೆ. ದೊಡ್ಡವರು ಚಿಕ್ಕವರನ್ನು ನುಂಗಿ ಬಿಡುತ್ತಾರೆ.
- ಕೀರ್ತಿ ಎನ್ನುವುದು ವ್ಯರ್ಥವಾದ ಮತ್ತು ನಕಲಿಯಾದ ಹೇರಿಕೆ. ಎಷ್ಟೋ ಬಾರಿ ನಮಗೆ ಯೋಗ್ಯತೆ ಇಲ್ಲದಿದ್ದರೂ ಬರುತ್ತದೆ. ಹಾಗೆಯೇ ನಮ್ಮ ತಪ್ಪಿಲ್ಲದಿದ್ದರೂ ಕಳೆದು ಹೋಗುತ್ತದೆ.
- ಆತ್ಮಸಾಕ್ಷಿ ಎನ್ನುವುದು ಏನೆಂದು ಅರಿಯಲಾರದಷ್ಟು ಪ್ರೀತಿ ಎಳಸು.
- ಕದಿಯಲ್ಪಟ್ಟವ ಮುಗುಳ್ನಕ್ಕಾಗ, ಕಳ್ಳನಿಂದ ಏನನ್ನೋ ಕಸಿದುಕೊಂಡಿರುತ್ತಾನೆ.
- ಆಕಾಂಕ್ಷೆ ಎನ್ನುವುದು ಸದೃಢವಾದ ವಸ್ತುವಿನಿಂದ ಮಾಡಿದ್ದಾಗಿರಬೇಕು.
- ಏನೂ ಇಲ್ಲದವರು ಏನನ್ನೂ ಕಳೆದುಕೊಳ್ಳಲಾರರು.
- ನೀವು ಸಮಯವೆಂಬ ಬೀಜವನ್ನು ಗಮನಿಸಿ. ಅದರಲ್ಲಿ ಯಾವುದು ಬೆಳೆಯುತ್ತದೆಯೋ ಯಾವುದು ಬೆಳೆಯುದಿಲ್ಲವೋ ಮೊದಲು ಹೇಳಿ, ಆನಂತರ ನನ್ನೊಡನೆ ಮಾತನಾಡಿ.
- ದೊಡ್ಡದೊಂದು ಸರಿಯನ್ನು ಮಾಡಲು, ಚಿಕ್ಕದೊಂದು ತಪ್ಪನ್ನು ಮಾಡಿ.
- ಸಂತುಷ್ಟರಾದ ಬಡವರು ಶ್ರೀಮಂತರೇ, ಮಾತ್ರವಲ್ಲ, ಸಾಕಷ್ಟು ಶ್ರೀಮಂತರು.
- ಸ್ವಲ್ಪಮಟ್ಟಿಗಿನ ಸಂಶಯ, ಬುದ್ಧಿವಂತರಿಗೆ ದಾರಿ ದೀಪದಂತೆ.
- ಅಶಕ್ತರನ್ನು ಮೇಲೆತ್ತಿದರೆ ಸಾಲದು, ಮುಂದೆಯೂ ಅವರಿಗೆ ಬೆಂಬಲವನ್ನು ನೀಡಬೇಕು.

- ಕೆಲವರು ಅಪರಾಧವೆಸಗಿ ಮೇಲೇರುತ್ತಾರೆ. ಕೆಲವರು ಸಚ್ಚಾರಿತ್ರ್ಯವುಳ್ಳವರಾಗಿದ್ದರೂ ಕೆಳಗುರುಳುತ್ತಾರೆ.
- ಪದಗಳ ಅಭಾವವಿದ್ದಲ್ಲಿ ಅದನ್ನು ನಿರರ್ಥಕವಾಗಿ ಬಳಸುವುದಿಲ್ಲ.
- ಕಟ್ಟಳೆಗಳನ್ನು ಮೀರಿದವರು ತಮ್ಮ ಬಯಕೆಗಳನ್ನೇ ಕಟ್ಟಳೆಗಳನ್ನಾಗಿಸಿಕೊಂಡಿರುತ್ತಾರೆ.
- ಸಂಕ್ಷೇಪವೇ ಜಾಣ್ಮೆಯ ಆತ್ಮ.
- ಎಲ್ಲ ಕಣ್ಣುಗಳೂ ತಮ್ಮನ್ನು ತಾವು ನಂಬಬೇಕೇ ವಿನಃ ಮಧ್ಯವರ್ತಿಗಳನ್ನು ನಂಬಬಾರದು.
- ಅಚ್ಚುಕಟ್ಟಾಗಿ ಮತ್ತು ಕಾಳಜಿಯಿಂದ ಮಾಡಿದ ವಸ್ತು, ತನ್ನನ್ನು ಭಯದಿಂದ ಹೊರತಾಗಿಸಿಕೊಂಡಿರುತ್ತದೆ.
- ಜಾಣ್ಮೆಯಿಂದ ಮತ್ತು ನಿಧಾನವಾಗಿ. ಏಕೆಂದರೆ ಜೋರಾಗಿ ಓಡುವವರು ಸಾಮಾನ್ಯವಾಗಿ ಎಡವುತ್ತಾರೆ.
- ಗತಕಾಲದ ಮಾತು ಕೇವಲ ಪೀಠಿಕೆ ಅಷ್ಟೇ.
- ಮರ್ಯಾದೆಯನ್ನು ಆರಾಧಿಸುವುದು ಅಪರಾಧವಾದರೆ, ನಾನೊಬ್ಬ ಮಹಾಪರಾಧಿ.
- ನಡೆಗೆ ನುಡಿಯನ್ನು ಹೊಂದಿಸಿ. ಹಾಗೆಯೇ, ನುಡಿಗೆ ನಡೆಯನ್ನೂ.
- ಸಾಂಗವಾಗಿ ಕೊನೆಗೊಂಡರೆ ಎಲ್ಲವೂ ಚೆನ್ನಾಗಿಯೇ ನಡೆಯಿತೆಂದು ಅರ್ಥ.
- ನಿಮ್ಮನ್ನೇ ಸುಡುವಷ್ಟರ ಮಟ್ಟಿಗೆ ನಿಮ್ಮ ಶತ್ರುವಿಗಾಗಿನ ಕುಲುಮೆಯನ್ನು ಕಾಯಿಸದಿರಿ.
- ಚಕ್ರ ತಿರುಗಿ ಒಂದು ಸುತ್ತು ಬಂದಿದೆ!
- ಇರುವುದೋ ಬಿಡುವುದೇ – ಅದೊಂದೇ ಪ್ರಶ್ನೆ!

ಸಮಾಜದಲ್ಲಿರುವ/ಸಾಮಾಜಿಕ ಮಾಧ್ಯಮದಲ್ಲಿರುವ ಬೇರೆ ಬೇರೆ ಮನಃಸ್ಥಿತಿಯುವರಿಗೆ ಅವರವರಿಗೆ ತಕ್ಕನಾದ ಅರ್ಥ ವಿವರಿಸಿ, ವಿಸ್ತರಿಸಿ ಪ್ರಯೋಜನವಿಲ್ಲ. ನಿಧಾನವಾಗಿ ಆಸ್ವಾದಿಸಿಯೇ ತೀರಬೇಕು. ಷೇಕ್ಸ್‌ಪಿಯರ್ ನ ಬರಹಗಳಲ್ಲಡಗಿರುವ ನೂರಾರು ಪದರಗಳನ್ನು ಸೂಕ್ಷ್ಮವಾಗಿ ಬಿಡಿಸಿದಾಗ, ನಮ್ಮಂಥ ಅಲ್ಪಮತಿಗಳಿಗೆ ದಕ್ಕುವುದು ಪ್ರಾಯಶಃ ಸ್ವಲ್ಪವೇ ಸ್ವಲ್ಪ. ಆ ಆಳ ವಿಸ್ತಾರಗಳು ಸಮಯದ ಹಂಗಿಗೆ ಒಳಪಡದೆ ಹಾಗೆಯೇ ಉಳಿದಿವೆ. ನಾವು ಬಗೆದಷ್ಟೂ ನಮಗೆ ಸಿಕ್ಕಿದೆ. (ಭಾಷಾಂತರ ಮತ್ತು ಸಂಗ್ರಹಣೆಗಳಿಂದ)

## ಬಂಟರ ಸಂಘ ಬೆಂಗಳೂರು

## ಬಂಟ್ಸ್ ಸೇವಾದಳ

ಹುಟ್ಟು ಹಾಗೂ ಸಾವು ಮನುಷ್ಯ ಜೀವನದ ಸಹಜ ಪ್ರಕ್ರಿಯೆಗಳಾಗಿದ್ದು, ಬೆಂಗಳೂರು ಹಾಗೂ ಸುತ್ತಮುತ್ತ ನೆಲೆಸಿರುವ ಸಮಾಜ ಬಾಂಧವರ ನಿಧನದ ಸಂದರ್ಭದಲ್ಲಿ ಬಂಟ್ಸ್ ಸೇವಾದಳ ಸಮಿತಿಯ ವತಿಯಿಂದ ಮೃತರ ಅಂತ್ಯಕ್ರಿಯೆ ವಿಧಿ–ವಿಧಾನ ನೆರವೇರಿಸಲು ಅಗತ್ಯ ಸಹಕಾರ / ಮಾಹಿತಿ ನೀಡಲು ಹಾಗೂ ಅಂತ್ಯಕ್ರಿಯೆಗೆ ಬೇಕಾಗುವ ಸಾಮಾಗ್ರಿ ಮತ್ತು ಇನ್ನಿತರ ಮಾಹಿತಿಯನ್ನು ಒದಗಿಸಲು ನಿರ್ಧರಿಸಲಾಗಿದೆ. ಸದಸ್ಯ ಬಾಂಧವರು ತುರ್ತು ಸಂದರ್ಭದಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

**ಮೊ : 97412 20559 / 70221 19739.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸತೀಶ್ ಶೆಟ್ಟಿ. ವಾಲ್ತೂರು**
ಸಂಚಾಲಕರು, ಬಂಟ್ಸ್ ಸೇವಾದಳ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

# Lakshmana Rekha



Samanvitha Shetty

Hindu mythology has many stories within each other which relates to our day to day living if we look at it with a perspective which can change many perceptions. I started my blogs with a view to share my perspective about many relatable topics which makes us wonder, Oh! Can this be thought like this too? Here is another topic which all Hindus relate to Sita and Ramayana. Lakshmana, Lord Rama's brother drew a protection line around the hut where he asked Sita to stay within so that he can go to see if Lord Rama was in any trouble and help him get back home safely. That line which Lakshmana drew to safeguard Sita is called "Lakshmana Rekha". Ravana was unable to cross this to abduct Sita and hence he tricked her to cross that and come out of the line. Lakshmana Rekha is a one-way protection. No one with bad intention can cross that but one who is within that can cross and come out which is what Sita did. She crossed the Lakshmana Rekha and came out of her protection to serve the disguised saint and fell into the trap of Ravana which led to the entire battle between Lord Rama and Ravana. This Lakshmana Rekha is what we have in all our lives which I call "Freedom within Boundaries".

Every individual should learn to have boundaries for their freedom and every parent should teach their kids the importance of this Lakshmana Rekha which can be easily crossed by us but when we stay within this it becomes difficult for evil to reach us.



*Knowing your limit is not always a limitation. It is the blessing you have to enjoy what life unfolds.*

My manager once told me, you draw a boundary around yourself and only people whom you want can get in and not everyone. I smiled at his observation and imagination. Current time we don't have Lakshmana in our lives, so our mythology has taught us that we have to draw our own Lakshmana Rekha to keep evil out of our reach. Until we become adults our parents do this for us but as we grow, we start ignoring and disrespecting that boundary. It is important to teach our kids to draw their own Lakshmana Rekha around them, so they respect the decision which their parents once took for them. Teach them right and wrong so they are capable to decide where to draw that line within which they can call it as freedom and beyond which they can call it as danger.

Lakshmana wanted to protect Sita because Lord Rama had told him to do so. This is how we function. Parents want to protect their kids, husband wants to protect his wife, elder brother wants to protect his younger siblings and the list goes on. But as time changes, we have to change our perception of protection. If Sita was made aware of the danger and the power

of the boundary drawn around her, maybe she could have gauged the danger which could not come closer to her crossing that boundary. Our mythology teaches us a very valuable lesson which will protect us and our future generations from the evil coming towards us. Explain the reason of the boundary you want to draw for your kids, spouse, siblings and sometimes even parents and enable the path which visualizes them to see what you are trying to protect them from. Help your loved ones to identify the importance of what stays within the boundary and what stays outside.

Our prayers and the divine power of God has given every individual to draw the Lakshmana Rekha around them and their loved ones. We fail to see it as our protection shield and think it as a barrier to our freedom. When we understand the value of this Lakshmana Rekha and realize the importance of freedom within boundaries, we can avoid the pain which comes when we forcibly cross that and walk towards something which can harm our existence and give pain to ourselves and our loved ones.

My daughter came home from school one day and told me, her bench mate threw the cap of her pen and now she can't find it. She was a bit upset about the incident but another friend of her told it is no big deal to lose the cap. I have lost many, now her sad mind was given a bit of solace because she was not the only one who lost the cap. This is how the power of that Lakshman Rekha reduces and we see kids drifting away from our values and start believing that it is okay for things to go wrong because I am not alone. Instead of teaching the right way of showing empathy we are building a world where we make kids feel okay to do wrong because not everyone is doing right. Just because I lost something, it doesn't make right for my friend also to lose something. This thought is very important to retain the power of that Lakshmana Rekha which initially we draw and later help the kids to embrace it and respect it.

When we respect what we have, we stay within the Lakshmana Rekha. When we love what we get, we respect the Lakshmana Rekha. When we value what we have, we enjoy the Lakshmana Rekha.

Freedom within boundaries is what makes us human. Respect that boundary because it is not always a fence, it is not always a prison, it is not always a restriction. When valued in the right spirit, Freedom within Boundaries is what makes our life worth living and helps us see what otherwise can go unnoticed within the time frame where it has to be valued.

Lakshmana Rekha has still retained the same power what it had then to protect Sita but today it is advanced because not everyone has a Lakshmana in their life, but everyone needs one. So, we are all empowered to draw our own Lakshmana Rekha to protect the Sita(goodness) within us. God always bless his children and gives them what they need and prepares them to take care and also be taken care of by his divine power.

Freedom is the joy we enjoy when we know the value it adds to our life. Boundary is the limit we decide to enrich the joy of Freedom which values what we have. When Freedom is enjoyed within the boundaries, we learn to value every bit of what we have. Give the world what we have to make the world what we want.

ಬಂಟರ ಸಂಘ ಬೆಂಗಳೂರು

# ಕ್ರೀಡಾ ಸಮಿತಿ

**ಆತ್ಮೀಯ ಸದಸ್ಯರೇ,**

2023–24ನೇ ಸಾಲಿಗೆ ಕ್ರೀಡಾ ಸಾಧನಾ ಪ್ರಶಸ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸುತ್ತಿದ್ದು, ಅರ್ಜಿ ಸಲ್ಲಿಸಬಯಸುವ ಅಭ್ಯರ್ಥಿಗಳು ಈ ಕೆಳಗಿನ ಅರ್ಹತೆಗಳನ್ನು ಹೊಂದಿದ್ದು, ದಾಖಲೆಗಳನ್ನು ಲಗತ್ತಿಸತಕ್ಕದ್ದು.

ತಮ್ಮ ಸಾಧನೆಗಳು ಕಳೆದ ಸಾಲಿನಲ್ಲಿ ಪಡೆದ ಪ್ರಶಸ್ತಿ ಸ್ವೀಕರಿಸಿರುವುದಕ್ಕಿಂತ ಹೆಚ್ಚಿನದಾಗಿರಬೇಕು.

ದೇಶ ಅಥವಾ ರಾಜ್ಯವನ್ನು ಪ್ರತಿನಿಧಿಸಿ ಪ್ರಶಸ್ತಿ ಪಡೆದಿರತಕ್ಕದ್ದು. ಇಲ್ಲವೇ ಅಖಿಲ ಭಾರತ ಅಂತರ–ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿನ ಪ್ರಶಸ್ತಿ / ಪದಕ ವಿಜೇತರಾಗಿರಬೇಕು.

ಭಾಗವಹಿಸಿರುವ ಎಲ್ಲಾ ಸ್ಪರ್ಧೆಗಳು ಭಾರತೀಯ ಒಲಿಂಪಿಕ್ಸ್ ಅಸೋಸಿಯೇಶನ್‌ನ ಪ್ರಾಯೋಜಕತ್ವದಲ್ಲಿ ನಡೆದಿರಬೇಕು ಅಥವಾ ಅದರಿಂದ ಗುರುತಿಸಲ್ಪಟ್ಟ ಅಂಗ ಸಂಸ್ಥೆಗಳ ವತಿಯಿಂದ ನಡೆಸಿರುವ ಕ್ರೀಡಾ ಕೂಟಗಳಾಗಿರಬೇಕು.

ಅರ್ಜಿಯೊಂದಿಗೆ ತಮ್ಮ ಇತ್ತೀಚಿನ ಸಾಧನೆಯ ದಾಖಲೆಗಳ ಎಲ್ಲಾ ಯಥಾಪ್ರತಿ, ತಮ್ಮ ವೈಯಕ್ತಿಕ ಪರಿಚಯ, 1 ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಒದಗಿಸಬೇಕು.

ಮೇಲ್ಕಂಡ ಅರ್ಹತೆಯುಳ್ಳ ಅರ್ಜಿಗಳನ್ನು ಸಂಘದ ಗೌರವ ಕಾರ್ಯದರ್ಶಿ ಇವರಿಗೆ ನಮೂದಿಸಿ ಸಂಘದ ವಿಳಾಸಕ್ಕೆ ದಿನಾಂಕ 31.12.2023ರ ಒಳಗಾಗಿ ತಲುಪುವಂತೆ ಸಲ್ಲಿಸಲು ಕೋರಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ 26.01.2024ರಂದು ನಡೆಯಲಿರುವ ಸಂಘದ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು.

**ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಶೆಟ್ಟಿ**
ಸಂಚಾಲಕರು, ಕ್ರೀಡಾ ಸಮಿತಿ

**ಕಿರಣ್‌ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ II ಕನ್ನಡ ರಾಜ್ಯೋತ್ಸವ ಆಚರಣೆ



ನಮ್ಮ ನಾಡ ಹಬ್ಬ ಕನ್ನಡ ರಾಜ್ಯೋತ್ಸವವನ್ನು ದಿನಾಂಕ 10.11.2023ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ II ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾದ ಡಾ. ಎಚ್. ಎಸ್. ಗಣೇಶ್ ಭಟ್ಟ, ಸಂಘದ ಅಧ್ಯಕ್ಷರು, ಗೌರವ ಕಾರ್ಯದರ್ಶಿ, ಶಾಲಾ ಪ್ರಾಂಶುಪಾಲರನ್ನು ಪೂರ್ಣಕುಂಭದೊಂದಿಗೆ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು. ಕನ್ನಡ ನಾಡು ನುಡಿಯನ್ನು ಬಿಂಬಿಸುವ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

# ಅತಿಕಾರೆ

## ಡಾ. ಇಂದಿರಾ ಹೆಗ್ಗಡೆ : ನೆಲಮೂಲದ ನಡೆ : ಶೋಧ – ಸ್ವಾದ

**ಡಾ. ಸುಧಾರಾಣಿ ಕಿನ್ನಿಗೋಳಿ**

ವ್ಯಷ್ಠಿರೂಪವಾದ ವ್ಯಕ್ತಿಗೆ ಕೋಶಗಳಿರುವಂತೆ, ಸಮಷ್ಠಿ ರೂಪವಾದ ಪ್ರದೇಶಕ್ಕೂ ಕೋಶಗಳಿವೆ. ವ್ಯಷ್ಠಿ ಮತ್ತು ಸಮಷ್ಠಿಯ ಅನುಸಂಧಾನ ಕಟ್ಟಿಕೊಡುವ ಸಾಂಸ್ಕೃತಿಕ ಭಾವ ಕೋಶವನ್ನು ಅನ್ವೇಷಣೆ ಮಾಡುವುದೇ ಸಂಶೋಧನೆ. ಪ್ರಾದೇಶಿಕ ಅನ್ನುವುದು ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ಮಾಡಿಕೊಂಡ ಭೌಗೋಳಿಕ ಚೌಕಟ್ಟು. ಒಂದು ನಿರ್ದಿಷ್ಟ ಚೌಕಟ್ಟಿನಲ್ಲಿ ನಡೆದ ಸಂಶೋಧನೆಗಳ ಫಲಿತಗಳು ಈ ಚೌಕಟ್ಟು ಮೀರಿ ವಿಸ್ತಾರವಾಗಬೇಕು. ಶೋಧದಲ್ಲಿ ಕಂಡುಕೊಂಡ ಚರಿತ್ರೆ, ಜಾನಪದ, ಸಂಸ್ಕೃತಿಯ ಆಯಾಮಗಳನ್ನು ಸ್ಥಳೀಯತೆಯಿಂದ ವಿಶ್ವಾತ್ಮಕಗೊಳಿಸಿಕೊಳ್ಳಬೇಕು.

'ಪುನಿ ಇತ್ತಿ ಕಂಡ–ಪುನಿ ದಾಂತಿ ಕಂಡ' ಅಂದರೆ ಬದು ಇರುವ ಗದ್ದೆ ಮತ್ತು ಬದು ಇರದ ಗದ್ದೆ ಎಂಬ ರೂಪಕದಲ್ಲಿ ಅನಾವರಣಗೊಂಡಿರುವ ತುಳುನೆಲ ಕಾಡು ಮತ್ತು ಕಡಲು, ಕೃಷಿ ಮತ್ತು ವ್ಯಾಪಾರ ಎಂಬ ಹಿನ್ನಲೆಯಲ್ಲಿ ರೂಪುಗೊಂಡಿರುವ ಸಾಂಸ್ಕೃತಿಕ ಸಂರಚನೆಗಳನ್ನು ಹೊಂದಿದೆ. ತುಳುಲೋಕದ ಈ ಬಹುರೂಪಿ ಸತ್ವ–ತತ್ವಗಳನ್ನು ಅರ್ಥೈಸುವುದಕ್ಕೆ, ಅನಾವರಣಗೊಳಿಸುವುದಕ್ಕೆ ಪ್ರಯತ್ನಿಸಿದ ತಜ್ಞರಲ್ಲಿ ಡಾ. ಇಂದಿರಾ ಹೆಗ್ಗಡೆಯವರು ಒಬ್ಬರು.



ನೆಲದ ಚರಿತೆಯನ್ನು ಗುರುತಿಸಿಕೊಳ್ಳುವ, ಜನಸಂಸ್ಕೃತಿಯ ಮಿಡಿತಗಳನ್ನು ಗ್ರಹಿಸಿಕೊಳ್ಳುವ, ಬಹುತ್ವದ ಮಾದರಿಗಳನ್ನು ಹುಡುಕಿಕೊಳ್ಳುತ್ತ, ಈ ಮಣ್ಣಿನ ಅನನ್ಯತೆಗಳನ್ನು ಅಸ್ವಾದಿಸಿಕೊಳ್ಳುತ್ತ, ತನ್ನೊಳಗೆ ಇವುಗಳನ್ನು ಒಳಗೊಳ್ಳುತ್ತ ಲೋಕಹಿತದ ಚರ್ಯೆಗಳಿಗೆ ದಿಟ್ಟವಾಗಿ, ಮುಕ್ತವಾಗಿ ತೆರೆದುಕೊಂಡವರು, ಬರೆದವರು, ಮಾತನಾಡಿದವರು ಡಾ. ಇಂದಿರಾ ಹೆಗ್ಗಡೆಯವರು.

ಸುಮಾರು 80ರ ದಶಕದಲ್ಲಿ ಪತಿಯ ಒತ್ತಾಸೆ ಮತ್ತು ಒಡ್ಡಿದ ಸವಾಲನ್ನು ಸ್ವೀಕರಿಸಿ ಸೃಜನಶೀಲ ಬರವಣಿಗೆಯನ್ನು ಅರಂಭಿಸಿದ ಡಾ.ಇಂದಿರಾ ಹೆಗ್ಗಡೆಯವರು ಖ್ಯಾತ ಇತಿಹಾಸ ಸಂಶೋಧಕರಾಗಿರುವ ಡಾ. ಎಂ. ಚಿದಾನಂದಮೂರ್ತಿಯವರ ಪೂರಕ ಬೆಂಬಲದಿಂದ ಅನ್ವೇಷಣೆಯ ದಾರಿಯಲ್ಲಿ ಮುನ್ನಡೆದವರು. ಎಳತ್ತೂರುಗುತ್ತಿನ ಡಾ. ಇಂದಿರಾ ಹೆಗ್ಗಡೆಯವರು ಸೈನಿಕರಾಗಿದ್ದ ತಮ್ಮ ಪತಿ ಎಸ್. ಆರ್. ಹೆಗ್ಡೆ (ಪೊಳಲಿ ಶೀನಪ್ಪ ಹೆಗ್ಗಡೆಯವರ ಮಗ) ಯವರ ಸಹಚರ್ಯದಿಂದಾಗಿ ಗುತ್ತಿನಂಗಳದಿಂದ ಜಗತ್ತಿನಂಗಣದಲ್ಲಿ ಸುತ್ತಾಡಿದವರು. ತುಳುವಿನ ಕೃಷಿ ಮಣ್ಣಿನಲ್ಲಿ ಚಿಗಿತು, ಕಂಪಿತ್ತ ನೆಲದಲ್ಲಿ ಅರಳಿ, ವಿಶ್ವದೆಲ್ಲೆಡೆ ವಿಹರಿಸಿ, ವಿಪುಲ ಸಾಂಸ್ಕೃತಿಕ ತಥ್ಯಗಳನ್ನು ಪ್ರತಿಪಾದಿಸಿದ ಜೀವಪರ ಮತ್ತು ಜನಪರ ಚಿಂತಕಿ ಡಾ. ಇಂದಿರಾ ಹೆಗ್ಗಡೆಯವರು.

ಇಂದಿರಾ ಹೆಗ್ಗಡೆಯವರು ಯಾವುದೇ ವಿಶ್ವವಿದ್ಯಾನಿಲಯದ ಮೆಟ್ಟಿಲು ಹತ್ತದೆ ವಿಶ್ವವಿದ್ಯಾನಿಲಯವೊಂದು ಮಾಡಬೇಕಾದ, ಮಾಡುವಷ್ಟು ಕೆಲಸಗಳನ್ನು ಮಾಡಿದವರು. ಅವರ ಸಾಹಿತ್ಯಿಕ ಸೃಜನಶೀಲತೆ ಮತ್ತು ಸಂಶೋಧನಾತ್ಮಕ ಕ್ರಿಯಾಶೀಲತೆ ಆರಂಭಗೊಂಡಿದ್ದು, ಅವರ 33ನೇ ವಯಸ್ಸಿನ ಹರೆಯದಲ್ಲಿ. ತುಳು ನೆಲದ ಸಂಶೋಧನಾ ಕ್ಷೇತ್ರದಲ್ಲಿ ತಮ್ಮ ನಿರಂತರ ಕ್ಷೇತ್ರಕಾರ್ಯ, ಜವಾಬ್ದಾರಿಯುತ ನಡೆ ಮತ್ತು ಬರಹಗಳಿಂದ ಘನತೆಯನ್ನು ಪಡೆದುಕೊಂಡವರು. ಸಣ್ಣ ಕಥೆಗಳು, ಕಾದಂಬರಿಗಳು, ಕವನ ಸಂಕಲನದ ಮೂಲಕ ಸೃಜನಶೀಲ ಬರವಣಿಗೆಯ ಸುಖವನ್ನು ಕಾಪಿಟ್ಟುಕೊಂಡವರು. ತಿರುಗಾಟದ ಹವ್ಯಾಸವಾಗಿ ರೂಢಿಸಿಕೊಂಡ ಪ್ರವಾಸದ ಅನುಭವಗಳನ್ನು ಕೂಡ ಸಾಂಸ್ಕೃತಿಕ, ವೈಚಾರಿಕ ಚಿಂತನೆಯ ರೂಪದಲ್ಲಿ ಹರಳುಗಟ್ಟಿಸಿ ಪ್ರವಾಸ ಸಾಹಿತ್ಯವನ್ನು ಬರೆದವರು. ಈ ತುಳುವ ಮನಸ್ಸಿನ ಕನ್ನಡ ಲೇಖಕಿ ಡಾ. ಇಂದಿರಾ ಹೆಗ್ಗಡೆಯವರ ಸಮಗ್ರ ಬರಹಗಳ ಅವಲೋಕನ ಕೃತಿ 'ಅತಿಕಾರೆ' ಲೋಕಾರ್ಪಣೆಗೊಂಡಿದೆ. ಡಾ. ಇಂದಿರಾ ಹೆಗ್ಗಡೆಯಂತಹ ಜನದನಿಯನ್ನು ಸಹೃದಯ ಓದುಗರು, ವಿದ್ವಾಂಸರು, ವಿಮರ್ಶಕರು, ಸಂಶೋಧಕರು, ಕಿರಿಯರು, ಗೆಳೆಯರು ಇಲ್ಲಿ ಮೊಗೆದು, ಕಡೆದು ಕಟ್ಟಿ ಕೊಟ್ಟಿದ್ದಾರೆ.

ಡಾ. ಇಂದಿರಾ ಹೆಗ್ಗಡೆಯವರ ಒಟ್ಟು ಸಂಶೋಧನಾ ಬರಹಗಳು ಕರಾವಳಿಯ ತುಳು ನೆಲದ ಜಾಡಿನಲ್ಲಿ

ರೂಪುಗೊಂಡವುಗಳು. ಹಾಗಾಗಿಯೇ ಈ ಕೃತಿಗೆ ಹೆಸರು 'ಅತಿಕಾರೆ'. ಕರಾವಳಿಗೆ ಮೊದಲು ಬಂದ ಭತ್ತದ ತಳಿ 'ಅತಿಕಾರೆ'. ಸತ್ಯದ ಬೆಳೆ ಎಂದು ಪರಿಗಣಿತವಾಗಿದೆ. ಡಾ. ಇಂದಿರಾ ಹೆಗ್ಗಡೆಯವರು ತಮ್ಮ 'ಸಿರಿಬಾರಿಲೋಕ' ಕೃತಿಯಲ್ಲಿ ಕೃಷಿಸಿರಿಯೊಂದಿಗೆ ಬಂದ ಸಾರಮಾನ್ಯ ದೈವಗಳು ಮತ್ತು ಗಂಡಗಣಗಳೊಂದಿಗೆ ಬಂದ ಬೆಳೆ ಇದು ಎಂದು ಉಲ್ಲೇಖಿಸಿದ್ದಾರೆ. ತುಳುನಾಡಿನ ದೈವಸ್ಥಾನದ ಕೊಡಿಮರಕ್ಕೆ ಕಟ್ಟುವ ಭತ್ತದ ತೆನೆ 'ಅತಿಕಾರೆ'. ಈ ಹಿನ್ನೆಲೆಯಲ್ಲಿ ಡಾ. ಇಂದಿರಾ ಹೆಗ್ಗಡೆಯವರ ಸಮಗ್ರ ಬರಹಗಳ ಮಂಥನದ ಸೂಡಿಗೆ 'ಅತಿಕಾರೆ' ಹೆಸರು ಅನ್ವರ್ಥವಾಗಿದೆ. ಡಾ. ಇಂದಿರಾ ಹೆಗ್ಗಡೆಯವರ ಬರಹಗಳ ಸಮಗ್ರತೆ, ವೈವಿಧ್ಯತೆ ಮತ್ತು ವೈಶಿಷ್ಟ್ಯತೆಗಳನ್ನು ವಿಶ್ಲೇಷಿಸುವುದರ ಜೊತೆಗೆ ಅದನ್ನು ತಾತ್ವಿಕವಾಗಿ ದಾಖಲಿಸುವುದು 'ಅತಿಕಾರೆ'ಯ ಹೂರಣ. ಇವರ ಹದಿಮೂರು ಸಂಶೋಧನಾ ಕೃತಿಗಳು, ಮೂರು ಪ್ರವಾಸಕಥನಗಳು, ನಾಲ್ಕು ಕಾದಂಬರಿಗಳು, ಮೂರು ಕಥಾಸಂಕಲನಗಳು, ಎರಡು ಜೀವನಚರಿತ್ರೆಗಳು, ಒಂದು ಕವನಸಂಕಲನ ಇವುಗಳನ್ನು ಉತ್ತು, ಬಿತ್ತಿ, ಬೆಳೆದು, ಶೋಧಿಸಿ, ಸೋಸಿ, ಆರಿಸಿ ರುಚಿಯಾದ ಸತ್ವಪೂರ್ಣವಾದ, ಪುಷ್ಟಿಯಾದ 'ಅಲೆಕಾರೆ'ಯಾಗಿದೆ. ರುಚಿಕಟ್ಟಾದ ಯೋಗ್ಯವಾದ, ಆರೋಗ್ಯಪೂರ್ಣವಾದ ಅಧ್ಯಯನ ಮತ್ತು ಸಂಶೋಧನೆಯೆಂಬ ಅಡುಗೆ ತಯಾರಿಗೆ ಬೇಕಾದ ಮೂಲ ಸಾಮಗ್ರಿಯಾಗಿದೆ, ಆಕರವಾಗಿದೆ.

'ಅತಿಕಾರೆ'ಯಲ್ಲ ಒಟ್ಟು ಐದು ಭಾಗಗಳಿವೆ, ಮೊದಲನೆಯ ಭಾಗ 'ಅಗೆದಷ್ಟೂ ಆಳ'. ಸಂಶೋಧನೆ ಅನ್ನುವುದು ಕೂಡ ಅಗೆದಷ್ಟು, ಮೊಗೆದಷ್ಟು ಕೊನೆ ಇಲ್ಲದ್ದು ಅನ್ನುವುದಕ್ಕೆ ಅನ್ವರ್ಥವಾಗಿ ಇರಿಸಲಾಗಿದೆ. ಈ ಭಾಗದಲ್ಲಿ ಇಂದಿರಾ ಹೆಗ್ಗಡೆಯವರ ಹದಿಮೂರು ಸಂಶೋಧನಾ ಕೃತಿಗಳ ಸಮಾಜೋ-ಸಾಂಸ್ಕೃತಿಕ ವಿಶ್ಲೇಷಣೆಗಳಿವೆ. ಎರಡನೇ ಭಾಗದಲ್ಲಿ ಇಂದಿರಾ ಹೆಗ್ಗಡೆಯವರು ಮಾಡಿದ ತಮ್ಮ ಪ್ರವಾಸ ಅನುಭವಗಳನ್ನು ಕ್ರೋಢಿಕರಿಸಿ ಬರೆದ ಮೂರು ಕೃತಿಗಳಾದ 'ಸಪ್ತ ಕನ್ಯೆಯರ ಕನ್ಯೆ ಭೂಮಿಯಲ್ಲ ನಮ್ಮ ನಡೆ', 'ಇಂದ್ರಪ್ರಸ್ತದಿಂದ ಐತಿಹಾಸಿಕ ನಡೆ', 'ಹಿಮಾಲಯ ಶಿಖರಗಳ ಸಾನಿಧ್ಯದಲ್ಲ ನಡೆದಾಟ' ಮುಂತಾದ ಕೃತಿಗಳ ವಿಶ್ಲೇಷಣೆ ಇದೆ. ಈ ಭಾಗಕ್ಕೆ 'ನಡೆದಷ್ಟು ಹಾದಿ' ಎಂಬ ಉಪಶೀರ್ಷಿಕೆ ನೀಡಲಾಗಿದೆ. ಪ್ರವಾಸ ಕೂಡ ಅವರ ಚಿಂತನೆಗಳಿಗೆ ರಹದಾರಿಯಾಗಿದೆ ಅನ್ನುವುದು ಈ ವಿಶ್ಲೇಷಣೆಗಳಿಂದ ತಿಳಿದುಬರುತ್ತದೆ. ಮೂರನೆ ಭಾಗದಲ್ಲಿ ಅವರ ಸೃಜನಶೀಲ ಬರಹಗಳಾದ ಸಣ್ಣಕಥೆಗಳು, ಕಾದಂಬರಿಗಳು, ಕವನಗಳ ವಿಶ್ಲೇಷಣೆಯನ್ನು 'ಭಾವ-ಅನುರಣನ' ಎಂಬ ಉಪಶೀರ್ಷಿಕೆಯಡಿ ನಡೆಸಲಾಗಿದೆ. ಅಂದರೆ ಇಲ್ಲಿ ಅವರ ಉರಿ, ಒಡಲುರಿ, ಮಂಥನ, ಅಮಾಯಕಿ ಮೊದಲಾದ ಕಾದಂಬರಿಗಳು, ಮೋಹಿನಿಯ ಸೇಡು, ಬದುಕು, ಪುರುಷರೇ ನಿಮಗೆ ನೂರು ನಮನಗಳು ಮುಂತಾದ ಸಣ್ಣಕಥೆಗಳ ಸಂಕಲನಗಳು, 'ಕಾವ್ಯಗಳ ಮಟದಿಂದ ನೀನೆದ್ದು ನಿಲ್ಲು' ಎಂಬ ಕವನಸಂಕಲನದ ಸಂವೇದನೆಗಳನ್ನು ಕಂಡುಕೊಳ್ಳಲಾಗಿದೆ. ಡಾ. ಇಂದಿರಾ ಹೆಗ್ಗಡೆಯವರು ತಮ್ಮ ಪತಿ ಎಸ್.ಆರ್. ಹೆಗ್ಡೆಯವರ ಜೊತೆಗೂಡಿ ಬರೆದ 'ಗುತ್ತಿನಿಂದ ಸೈನಿಕ ಜಗತ್ತಿಗೆ' ಎಂಬ ಅನುಭವ ಕಥನದ ವಿಶ್ಲೇಷಣೆಯು ಈ ಭಾಗದಲ್ಲಿದೆ. ಈ ಗ್ರಂಥದ ನಾಲ್ಕನೇ ಭಾಗದಲ್ಲಿ 'ಬಿಂಬ ಪ್ರತಿಬಿಂಬ' ಎಂಬ ತಲೆಬರಹದಡಿಯಲ್ಲಿ ಡಾ. ಇಂದಿರಾ ಹೆಗ್ಗಡೆಯವರ ವಿವಿಧ ಕೃತಿಗಳಿಗೆ ಖ್ಯಾತ ವಿದ್ವಾಂಸರಾದ ಡಾ. ಎಂ. ಚಿದಾನಂದ ಮೂರ್ತಿ, ಪ್ರೊ. ಅಮೃತ ಸೋಮೇಶ್ವರ, ಬಿ.ಎ ವಿವೇಕ ರೈ, ಎಸ್. ನಾಗರಾಜ, ಚೆನ್ನವೀರ ಕಣವಿ, ಅನುಪಮಾ ನಿರಂಜನ, ಸಾ.ಶಿ. ಮರುಳಯ್ಯ ಮುಂತಾದವರು ಬರೆದ ಮುನ್ನುಡಿಗಳು, ಎ.ಸಿ. ಭಂಡಾರಿ ಮತ್ತು ಡಾ. ವಸುಂಧರಾ ಭೂಪತಿಯವರ ಪ್ರಕಾಶಕರ ಸ್ಥಾನದ ಬರಹಗಳಿವೆ. ಕೊನೆಯ ಐದನೇ ಭಾಗದ 'ವ್ಯಕ್ತಿ-ಅಭಿವ್ಯಕ್ತಿ'ಯಲ್ಲಿ ಸಹೃದಯ ಓದುಗರು ನೀಡಿದ ಪ್ರತಿಕ್ರಿಯೆಗಳು, ಪತ್ರಿಕೆಗಳಲ್ಲಿ ನೀಡಿದ ಪ್ರತಿಸ್ಪಂದನೆಗಳಲ್ಲಿ ಆಯ್ದವುಗಳನ್ನು ಸಂಕಲಿಸಲಾಗಿದೆ. ಇಲ್ಲಿ ಎಸ್.ಆರ್. ಹೆಗ್ಡೆ ಮತ್ತು ಡಾ. ಇಂದಿರಾ ಹೆಗ್ಗಡೆಯವರ ವ್ಯಕ್ತಿ ಪರಿಚಯವಿದೆ.


ನಮ್ಮ ಸುತ್ತಮುತ್ತಲಿನ ನಿಜವನ್ನು ಅರಿಯುವ ಪ್ರಯತ್ನವೇ ಸಂಶೋಧನೆಯ ಮೊದಲ ಹೆಜ್ಜೆ. ಇದು ವಿವಿಧ ಗ್ರಹಿಕೆಗಳ, ಪ್ರಮೇಯಗಳ ಜೊತೆಗೆ ನಡೆಸುವ ಸಂವಾದ. ತುಳುನೆಲದ ನಾಗಾರಾಧನೆ, ಭೂತಾರಾಧನೆ, ಕಂಬಳ ಇವೆಲ್ಲ ಕೃಷಿ ಸಂಸ್ಕೃತಿಯ ಕುರುಹುಗಳು. ಕೃಷಿ ಸಂಬಂಧಿತ ಬೇಸಾಯ ಪೋಷಕಗಳು. ವರ್ತಮಾನದಲ್ಲಿನ ಬೇಸಾಯ ಸಂಸ್ಕೃತಿಯ ಪಲ್ಲಟದ ಹಿನ್ನಲೆಯಲ್ಲಿ ಈಗ ಆಚರಣೆಗಳು, ಆರಾಧನೆಗಳು ಮರು ಕಟ್ಟಲ್ಪಡುತ್ತಿವೆ. ಒಂದು ಸಮೃದ್ಧ ಸ್ಮೃತಿ-ವಿಸ್ಮೃತಿಗಳನ್ನು ವರ್ತಮಾನದ ಸಾಂಸ್ಕೃತಿಕ ಚಲನೆಗಳ ಜೊತೆಯಲ್ಲಿ ಇರಿಸಿಕೊಂಡು ನಡೆಸುವ ಸಂವಾದಗಳಿಂದ ಒಂದು ಇತ್ಯಾತ್ಮಕ ಮುಂಚಲನೆ ಸಾಧ್ಯವಾಗಬೇಕು ಎಂಬ ಆಶಯದೊಂದಿಗೆ ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡದ. ಪೆಟ್ಟೊಂದು ತುಂಡೆರಡು ಎಂಬಂತೆ ಮಾತನಾಡುವ ಡಾ. ಇಂದಿರಾ ಹೆಗ್ಗಡೆಯವರ ಬರಹಗಳು ಮಂಥನಕ್ಕೆ

ಒಳಗಾಗಿವೆ. ಬಿ.ಎ ವಿವೇಕ ರೈಯವರ ಕಲ್ಪನೆ ಮತ್ತು ಮಾರ್ಗದರ್ಶನದಲ್ಲಿ ಡಾ. ಜ್ಯೋತಿ ಚೇಳ್ಯಾರು ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮರ್ಥ ಸಂಪಾದಕೀಯ ಮಂಡಳಿಯ ನೇತೃತ್ವದಲ್ಲಿ ಈ ಗ್ರಂಥ ಸಿದ್ಧಗೊಂಡಿದೆ. ಎಸ್.ಆರ್. ಹೆಗ್ಡೆ ಚಾರಿಟೇಬಲ್ ಟ್ರಸ್ಟ್(ರಿ), ತುಳುಪರಿಷತ್ ಮಂಗಳೂರು, ಕರಾವಳಿ ಲೇಖಕಿಯರ – ವಾಚಕಿಯರ ಸಂಘ ಮಂಗಳೂರು, ಸ್ಕೂಲ್ ಆಫ್ ಸೋಶಿಯಲ್ ವರ್ಕ್ ರೋಶನಿ ನಿಲಯದ ಕನ್ನಡ ಸಂಘ ಮತ್ತು ಆಕೃತಿ ಆಶಯ ಪಬ್ಲಿಕೇಶನ್ ಮಂಗಳೂರು. ಈ ಸಂಸ್ಥೆಗಳ ಸಹಯೋಗದಲ್ಲಿ ಈ ಕೃತಿ ಲೋಕಾರ್ಪಣೆಗೊಂಡಿದೆ.

'ಅತಿಕಾರೆ' ಸಾಂಪ್ರದಾಯಿಕ ಸ್ವರೂಪದ ಅಭಿನಂದನಾ ಗ್ರಂಥವಲ್ಲ. ಡಾ. ಇಂದಿರಾ ಹೆಗ್ಗಡೆಯವರ ಅನುಭವ ಕಥನ, ಸಾಹಿತ್ಯಿಕ ಚಿಂತನೆ ಮತ್ತು ಸಾಂಸ್ಕೃತಿಕ ಶೋಧಗಳ ಕುರಿತಾದ ಸೂಕ್ಷ್ಮ ನಿರ್ವಚನಗಳಿರುವ ಕೃತಿ. ತುಳುನಾಡಿನ ಸಾಂಸ್ಕೃತಿಕ ಅನನ್ಯತೆಗಳನ್ನು ಹುಡುಕಿಕೊಂಡ ಡಾ. ಇಂದಿರಾ ಹೆಗ್ಗಡೆಯವರ ಬದ್ಧತೆ, ಕಠಿಣಶ್ರಮ, ಸಂಸ್ಕೃತಿಪ್ರೀತಿಯನ್ನು ಗುರುತಿಸುವುದರ ಜೊತೆಗೆ ತುಳುನಾಡಿನ ಅಸ್ಮಿತೆಯನ್ನು ಪರಿಚಯಿಸುತ್ತದೆ. ಸಂಶೋಧನೆಯೆಂಬ ಕತ್ತಿಯ ಅಲಗಿನ ಮೇಲಿನ ನಡಿಗೆಯನ್ನು ಬಹು ಸಾಮರ್ಥ್ಯದಿಂದ, ಜತನದಿಂದ ನಡೆಸಿದ ಡಾ. ಇಂದಿರಾ ಹೆಗ್ಗಡೆಯವರ ಹೆಜ್ಜೆಗುರುತುಗಳು ಯುವಪೀಳಿಗೆಯ ವಿದ್ಯಾರ್ಥಿ, ಸಂಶೋಧಕರಿಗೆ ಬೆಳಕಿಂಡಿ. ಡಾ. ಇಂದಿರಾ ಹೆಗ್ಗಡೆಯವರ ಅಲೋಚನಾಕ್ರಮಗಳ, ಬರಹಗಳ, ಸಂಶೋಧನಾ ಪ್ರಕಟಣೆಗಳ, ಮರುಓದಿನಿಂದ ಹೊಸ ತಲೆಮಾರಿನ ಸಂಶೋಧಕರು ತಮ್ಮ ನೆಲದ ಮೇಲಿನ ಪ್ರೀತಿಯನ್ನು ಇನ್ನಷ್ಟು ಗಟ್ಟಿಗೊಳಿಸುವುದಕ್ಕೆ ಮತ್ತು ಇನ್ನಷ್ಟು ಹೊಸ ಆಯಾಮಗಳಲ್ಲಿ ಸಂಶೋಧನೆ ಮತ್ತು ಅಧ್ಯಯನಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ತೋರುಗಂಬವಾಗಿದೆ. ನೆಲಮೂಲದ ಶೋಧದ ಈ ಪಯಣದಲ್ಲಿನ ಸ್ವಾದಕ್ಕೊಂದು ಪಾಕಸಾಮಗ್ರಿಗಳನ್ನು 'ಅತಿಕಾರೆ' ನೀಡುತ್ತದೆ ಅನ್ನುವುದೇ ಈ ಕೃತಿಯ ಹೆಗ್ಗಳಿಕೆ.

**ಕರ್ನಾಟಕ ಲೇಖಕಿಯರ ಸಂಘ ನೀಡುವ ಎಚ್.ಎಸ್. ಪಾರ್ವತಿ ದತ್ತಿ ಪ್ರಶಸ್ತಿ–2022ನೇ ಸಾಲಿಗೆ ಡಾ. ಇಂದಿರಾ ಹೆಗ್ಗಡೆಯವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ಹತ್ತು ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.**


**ಆತ್ಮೀಯ ಬಂಧುಗಳೇ,**



ಮಲೆನಾಡಿನ ಒಂದು ಸಣ್ಣ ಹಳ್ಳಿಯಿಂದ ಮಹಾನಗರ ಬೆಂಗಳೂರಿಗೆ ಬಂದು ತಮ್ಮ ಸ್ವಂತ ಪರಿಶ್ರಮದಿಂದ ಯಶಸ್ಸಿನ ಉತ್ತುಂಗಕ್ಕೇರಿ ಅದೆಷ್ಟೋ ಜನರಿಗೆ ಆಶ್ರಯದಾತರಾಗಿ, ಅನ್ನದಾತರಾಗಿ, ಮಾರ್ಗದರ್ಶಕರಾಗಿ ತುಂಬು ಜೀವನವನ್ನು ನಡೆಸಿ 70 ರ ವಸಂತಕ್ಕೆ ಕಾಲಿಡುತ್ತಿರುವ ನಮ್ಮ ನಿಮ್ಮೆಲ್ಲರ ನೆಚ್ಚಿನ ಶ್ರೀ. ಶ್ರೀನಿವಾಸ ಸೂಡರ ಎಪ್ಪತರ ಸಂಭ್ರಮ–ಗುರು ವಂದನಾ ಕಾರ್ಯಕ್ರಮವನ್ನು ಅವರ ಶಿಷ್ಯರು ಆಯೋಜಿಸಿದ್ದು ಶ್ರೀಯುತರಿಗೆ ಅಭಿಮಾನ ಪೂರ್ವಕವಾಗಿ ಅಭಿನಂದಿಸುವ ಕೃತಜ್ಞತಾ ಕಾರ್ಯಕ್ರಮದ ಜೊತೆಗೆ, ಶ್ರೀಯುತರ ಕುರಿತಾದ ತಮ್ಮ ಅಭಿಪ್ರಾಯ – ಗೌರವದ ಜ್ಯೋತಕವಾಗಿ ಅಕ್ಷರರೂಪ ಕೊಟ್ಟು ಪುಸ್ತಕವಾಗಿ ಹೊರ ತರುವ ಅಭಿನಂದನಾ ಗ್ರಂಥವನ್ನು ಬಿಡುಗಡೆಗೊಳಿಸುವ ಈ ಸಂಭ್ರಮಕ್ಕೆ ನೀವು ನಾವೆಲ್ಲರೂ ಜೊತೆಗೂಡೋಣ ಎನ್ನುವ ಸದುದ್ದೇಶ ನಮ್ಮದು.........

ಈ ಕಾರ್ಯಕ್ರಮವು ದಿನಾಂಕ 07–01–2024ರ ಭಾನುವಾರ ದಂದು ಸಮಯ 4.30ರಿಂದ ಮಹಾಲಕ್ಷ್ಮಿಪುರಂನ ಡಾ. ರಾಜಕುಮಾರ್ ಒಳಾಂಗಣ ಕ್ರೀಡಾಂಗಣದಲ್ಲಿ ಅಭಿನಂದನಾ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ. ಹೆಚ್. ಎಸ್. ರಾಘವೇಂದ್ರ ಶೆಟ್ಟರ ನೇತೃತ್ವದಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಎಲ್ಲಾ ಬಂಧು ಮಿತ್ರರಿಗೆ ಆತ್ಮೀಯ ಸ್ವಾಗತ...
ಶ್ರೀನಿವಾಸ ಸೂಡರ ಅಭಿಮಾನಿ ಬಳಗ, ಬೆಂಗಳೂರು.
ಪ್ರೀತಿಯಿಂದ.....



**ಹೆಚ್. ಎಸ್. ರಾಘವೇಂದ್ರ ಶೆಟ್ಟಿ**
ಗೌರವಾಧ್ಯಕ್ಷರು
ಅಭಿನಂದನಾ ಸಮಿತಿ
**98451 92244 / 97398 03908**
**93808 22972 / 96639 77388**

ADVT.

# BUNTS SANGHA BANGALORE
# SCHOLORSHIP & AWARDS COMMITTEE
# AWARDS FOR EXELLENCE

**Following awards for the year 2023-24 are available to achievers of excellence in various fields as described below:**

1. Mr. C.L Naik Memorial Award for the **Best Outgoing Engineering Student.**
2. Dr. K.K. Hegde Memorial Award for the **Best Outgoing Medical Student.**
3. Mr. M. Sunder Ram Shetty Memorial Award for the **Best Outgoing Commerce Student.**
4. Mrs. Ammanni Ramanna Shetty Memorial Award for the **Best All round Girl Student.**
5. Mr. Charmakki Narayana Shetty Award for the **Best outgoing Law Student**.
6. Mrs. Akkayya N. Shetty Award for the **Best Outgoing Dental Student.**
7. Mr. K.P. Ramanna Shetty Award for the **Best B.Sc (Ag)/ P.U.C (Science) Student.**
8. Mr. H.T. Bhandary Award for the **Best Student in Sports.**
9. Mr. P.S. Thimmappa Shetty Memorial Award for **Any Achievement for Excellence.**
10. Ms. Sheetal Krishnappa Memorial Award for a **Girl showing All-round Excellence.**
11. Master Jayasheel G. Shetty Memorial Award for the **Outstanding Student in B.E (Electronics) or any other branch of Engineering.**
12. Miss. Raksha Rai Memorial Award for **Excellence in Classical Music.**
13. Mullad Lakshmi Sheenappa Shetty Award for the **Best outgoing student in Veterinary Science.**
14. Smt. Kenjooru Nayakara Mane Doddakka Ananth Shetty Memorial Award for the **Best Outgoing Female Medical Student.**
15. Sri. Maralimane Ananth Shetty Memorial Award for the **Best Outgoing Ophthalmologist" or any other Post Graduation in Medicine.**
16. Miss. Raksha M Shetty Memorial Award for **Excellence in Classical Dance**.
17. Sri. Mohandas N Hegde Memorial Award for **Best Outgoing Law Student**.
18. Sri. Niddodi Premdas Shetty Memorial Award for **All-round Excellence Boy, Rural Student.**
19. Kolkebail Nadumane Shrimathi Vanajakshi Karunakar Shetty Memorial Award for **All-round Excellence Girl Student.**
20. Vandar Thenkabettu Balakrishna Shetty Memorial Award for Highest Scoring Girl in **Bachelor of Commerce and pursuing Higher Studies.**
21. Dr. K. Nagappa Alva & Smt. Kalyani Alva memorial award' for**Academic Excellence in the field of Science, Commerce & Arts.**
22. Dr. K. Nagappa Alva & Smt. Kalyani Alva memorial award' for **Excellence in the field of Cultural (Art, Music, Dance, Yakshagana, Drama etc.).**
23. Dr. K. Nagappa Alva & Smt. Kalyani Alva memorial award' for **Excellence in the field of Sports, Yoga**.

24. Mr. Kishan Jaladhar Shetty Award for **'Best outgoing Management Student' or any other Excellence.**
25. Ladies Wing Rajatha Sambrama Memorial Award' for **highest scoring girl in SSLC/10th Standard.**
26. Ladies Wing Rajatha Sambrama Memorial Award' in highest scoring girls in **II PUC/12th standard.**
27. Late Sooda Sanjiva Shetty and Late Sarojini Sanjiva Shetty Memorial cash award for **economically backward meritorious student pursuing PUC, Degree or any other professional course (3 Awards).**
28. Late Shakthish Shetty Memorial Excellence Award for **highest scoring girl student in PUC (4 Awards).**
29. Late K.S. Harshavardhan Shetty Memorial Endowment Award for **meritorious student pursuing PUC, Degree or any other professional course** who has lost their father **(2 Awards).**
30. Brahmavara Tenkumane Late Dr. B. Raghava Shetty memorial Award for **Economically backward meritorious Bunt student pursuing Medical Education**.

Candidates eligible and desirous, who have completed their course during the current year may apply along with their personal details, attested copy of the marks card, recent photograph, **Bank account Passbook copy or Cancelled cheque copy**(compulsory)and telephone number, so as to reach the Sangha office on or before 31.12.2023. Selected candidates who attend the Founder's Day Celebration on 26.01.2024 will be honored with Award and cash prize.

**Anandram Shetty B.**
Hon. Secretary

**M. Muralidhar Hegde**
President

**Ajith Shetty Ulthoor**
Convenor

Scholarship & Awards Committee

**Sadananda Sulaya**
Chairman

# Congratulations



At the recently held Annual General Meeting of the Bangalore Apartments' Federation(BAF), Mr.Vikram Rai was elected as the President of the Federation for a 2-year term of 2023-25. BAF is the Federation of Apartment and Villa Resident Welfare Associations across Bangalore with membership of more than 1250 residential communities who house nearly 3 Lakh households. As the President, Mr.Vikram will head the Governing and Executive Councils of the Federation comprising more than 75 leadership representatives across member chapters of BAF. Mr.Vikram has previously also served as the Treasurer and General Secretary of the Federation.

Mr.Vikram Rai is the son of Sri.M.Vishwanath Rai who was previously an Executive Committee Member of Bunts Sangha Bangalore and Chief Manager(Retd.) at Vijaya Bank. Bunts Sangha Bangalore congratulates and wishes him all the Best.

# ಬಂಟರ ಸಂಘ ಬೆಂಗಳೂರು– ದೀಪಾವಳಿ ಸಡಗರ

ಬಂಟರ ಸಂಘ ಸಾಂಪ್ರದಾಯಿಕವಾಗಿ ಆಚರಿಸುವ ಹಬ್ಬಗಳಲ್ಲಿ ದೀಪಾವಳಿ ಆಚರಣೆ ಧಾರ್ಮಿಕ ಆಚರಣೆಗೆ ಒತ್ತು ನೀಡಿದರೆ, ಕರಾವಳಿಯ ಸಂಸ್ಕೃತಿ ಮತ್ತು ಸಂಸ್ಕಾರಗಳ ಅನಾವರಣಕ್ಕೆ ಹತ್ತು ತಾಯಂದಿರ ಮಕ್ಕಳನ್ನು ಒಂದೆಡೆ ಸೇರಿಸಿ, ನಲಿತು ಬೆರೆತು, ಸಂತೋಷದಾಯಕ ಸಂಜೆಯಲ್ಲಿ ತನ್ನೆಲ್ಲ ಯಾಂತ್ರಿಕ ಜೀವನಕ್ಕೆ ಮಾಂತ್ರಿಕ ಶಕ್ತಿಯನ್ನು ನೀಡುವ ಪ್ರಯತ್ನಕ್ಕೆ ನಮ್ಮ ವೇದಿಕೆ ಸಾಕ್ಷೀಭೂತವಾಯ್ತು. ದೀಪಾವಳಿ ಬೆಳಕಿನ ಹಬ್ಬ, ತಮಸೋಮಾ ಜ್ಯೋತಿರ್ಗಮಯ, ಕತ್ತಲೆಯಿಂದ ಬೆಳಕಿನೆಡೆಗೆ ಅಜ್ಞಾನದಿಂದ ಜ್ಞಾನದೆಡೆಗೆ ಸಾಗತಕ್ಕ ವಿಶಿಷ್ಟ ಆಚರಣೆ.



ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿದ ಮಾಜಿ ಸಚಿವರೂ, ಪ್ರಸಕ್ತ ವಿಜಯನಗರದ ಶಾಸಕರೂ ಆಗಿರುವ ಶ್ರೀ ಎಂ. ಕೃಷ್ಣಪ್ಪ, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಮಾಜಿ ಸಚಿವರೂ, ಮಾಜಿ ಸಂಸದರೂ ಆದ ಕೆ. ಜಯಪ್ರಕಾಶ ಹೆಗ್ಡೆ, ಬೆಳ್ತಂಗಡಿ ಕ್ಷೇತ್ರದ ಶಾಸಕರೂ ಜೀವರಾಜ್ ಆಳ್ವ ಸದ್ಭಾವನಾ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀ ಹರೀಶ್ ಪೂಂಜರವರು ಹಾಗೂ ಸಂಘದ ಅಧ್ಯಕ್ಷರು ಶ್ರೀ ಎಂ. ಮುರಲೀಧರ ಹೆಗ್ಡೆ, ಕಾರ್ಯದರ್ಶಿ ಶ್ರೀ ಬಿ. ಆನಂದರಾಮ ಶೆಟ್ಟಿ, ಇತರ ಪದಾಧಿಕಾರಿಗಳನ್ನು ಒಳಗೊಂಡು ಪ್ರಥಮದಲ್ಲಿ ಗೋಪೂಜೆಯನ್ನು ಭಕ್ತಿಭಾವಗಳೊಂದಿಗೆ ಆಚರಿಸಲಾಯಿತು.

ಮುಂದಿನ ಕಾರ್ಯಕ್ರಮ ತುಳಸೀ ಪೂಜೆ

ಪ್ರಸೀದ ಶ್ರೀ ತುಳಸೀದೇವಿ, ಪ್ರಸೀದ ಶ್ರೀ ಹರಿವಲ್ಲಭ

ಸಾಗರ ಮತನ್ನೊಬ್ದುತೆ, ತುಳಾಸ್ವಜಂ ನಮಮ್ಯಾಹಃ

ಎಂಬಂತೆ ತುಳಸಿ ಆರಾಧನೆ ನಡೆದು ಸಭಾಂಗಣದಲ್ಲಿ ನಿರ್ಮಿಸಲಾದ ಅಭ್ಯಂಜನ ಪೂಜೆ ಐದು ಜನ ಮುತ್ತೈದೆಯರ ಸಹಕಾರದೊಂದಿಗೆ ವಿದ್ಯುಕ್ತವಾಗಿ ಗಣ್ಯವರೇಣ್ಯರು ನೆರವೇರಿಸಿದರು. ಭತ್ತದ ರಾಶಿಗೆ (ಹೊಲಿ ರಾಶಿ) ನೆಣಿಕೋಲಿಟ್ಟು ಪೂಜೆ ಜೊತೆಗೆ ಬಲಿಯೇಂದ್ರನನ್ನೂ ಸ್ಮರಿಸಲಾಯಿತು.

ಸಭಾಕಾರ್ಯಕ್ರಮದ ಪ್ರಾರಂಭದಲ್ಲಿ ಸಂಘದ ಸದಸ್ಯೆಯರಿಂದ ಪ್ರಾರ್ಥನೆ, ಗೌರವ ಕಾರ್ಯದರ್ಶಿಗಳು, ಸಮಯೋಚಿವೂ ಸಾಂದರ್ಭಿಕವೂ ಆಗಿ ವೇದಿಕೆ ಮೇಲಿದ್ದ ಅತಿಥಿ ಮಹೋದಯರಿಗೆ ಹೂಗುಚ್ಛ ನೀಡಿ ಸ್ವಾಗತಿಸಿದರು. ವೇದಿಕೆ ಮೇಲೆ ಆಸೀನರಾದ ಗಣ್ಯರು, ಸಂಘದ ಪದಾಧಿಕಾರಿಗಳು ದೀಪ ಪ್ರಜ್ವಲನೆಯೊಂದಿಗೆ ಸಭಾಕಾರ್ಯಕ್ರಮಕ್ಕೆ ಚಾಲನೆ ನೀಡಿದರು.




ಯುವ ನಾಯಕರೂ ಕ್ರೀಯಾಶೀಲ ವ್ಯಕ್ತಿತ್ವದ ಶ್ರೀ ಹರೀಶ್ ಪೂಂಜರವರು ತನ್ನ 35ನೇ ವಯಸ್ಸಿನಲ್ಲಿಯೇ ಶಾಸಕರಾಗಿ ಆಯ್ಕೆಯಾದ ಓರ್ವ ಬಂಟನಾಯಕ, ಎರಡನೇ ಬಾರಿಗೂ ಆಯ್ಕೆಯಾಗಿ ತನ್ನ ಪ್ರತಿಭೆಗೆ ಕಾರ್ಯತತ್ಪರತೆಗೆ ಸೈ ಎನಿಸಿಕೊಂಡರು. ಬೆಂಗಳೂರಿನಲ್ಲಿ ಡಾ. ಜೀವರಾಜ ಆಳ್ವರ ರಾಜಕೀಯ, ಸಮಾಜಸೇವೆ ಚಿಂತನೆ, ಯೋಚನೆ, ಯೋಜನೆಗಳು, ನೆನಪಿನ ಅಂಗಳದಲ್ಲಿ ಸ್ಥಿರಸ್ಥಾಯಿ. ಇಂತಹ ಮಹಾನುಭಾವರ ಹೆಸರಿನಲ್ಲಿ ಬಂಟರ ಸಂಘ ಬೆಂಗಳೂರು ಸದ್ಭಾವನಾ ಪ್ರಶಸ್ತಿ ಸ್ಥಾಪಿಸಿ ಕ್ರೀಯಾಶೀಲ ವ್ಯಕ್ತಿಗಳನ್ನು (ಬಂಟ ಸಮಾಜದ) ಗುರುತಿಸಿ ದಿ. ಆಳ್ವರ ಹೆಸರಿಗೆ ಮೆರಗನ್ನು ನೀಡಿ ಯುವ ಮುಂದಾಳುಗಳಿಗೆ ಇನ್ನಷ್ಟು ಜವಾಬ್ದಾರಿಯನ್ನು ನೀಡಿದಂತಾದರೆ ಅತಿಶಯೋಕ್ತಿಯಲ್ಲ.

ಪ್ರಶಸ್ತಿ ಪ್ರಧಾನವನ್ನು ಶ್ರೀ ಎಂ. ಕೃಷ್ಣಪ್ಪ ಹಾಗೂ ಶ್ರೀ ಜಯಪ್ರಕಾಶ್ ಹೆಗ್ಡೆಯವರು ಸಂಘದ ಪದಾಧಿಕಾರಿಗಳೊಂದಿಗೆ

ಪ್ರದಾನ ಮಾಡಿ ಶ್ರೀ ಹರೀಶ್ ಪೂಂಜರು ಸ್ವೀಕಾರಕ್ಕೆ ಉತ್ತರವಾಗಿ ತನ್ನ ರಾಜಕೀಯ ಜೀವನದ ನಡೆದು ಬಂದ ದಾರಿಯ ಕಿರು ನೋಟವನ್ನು ಸಾದರಪಡಿಸಿ ಬಂಟರ ಸಂಘ ಬೆಂಗಳೂರಿಗರಿಗೆ ಅಭಿನಂದನೆ ಸಲ್ಲಿಸಿದರು.

ಡಾ. ಆಳ್ವರ ಹೆಜ್ಜೆಗುರುತುಗಳನ್ನು ಪರಿಚಯಿಸಿ ನಾಯಕತ್ವದ ಮಹತ್ವವನ್ನು 3 ಕ್ಷೇತ್ರಗಳಲ್ಲಿ ಆಳ್ವರು ಶಾಸಕರಾಗಿ ಆಯ್ಕೆಯಾದ ಪ್ರಭುತ್ವವನ್ನು ಮೆರೆದ ರಂಗುರಂಗಿನ ರಾಜಕೀಯ ಜೀವನದ ತುಣುಕುಗಳನ್ನು ತಿಳಿಯ ಪಡಿಸಿದರು.



ಶ್ರೀ ಎಂ. ಕೃಷ್ಣಪ್ಪನವರು ಮುಖ್ಯ ಅತಿಥಿಗಳಾಗಿ ಬಂಟರ ಸಂಘದ ಅನ್ಯೋನ್ಯ ಸಂಬಂಧಗಳ ನಡೆದು ಬಂದ ದಾರಿ ಹಾಗೂ ಹೊಸತನದ ಹುಡುಕಾಟದಲ್ಲಿ ಪ್ರಗತಿಯನ್ನು ಶ್ಲಾಘಿಸುತ್ತಾ ತನ್ನ ಕ್ಷೇತ್ರದಲ್ಲಿರುವ ಈ ಸಂಸ್ಥೆಗೆ ಸಕಲ ನೆರವು ನೀಡುವುದಾಗಿ ಸಂಘದ ಓರ್ವ ಸದಸ್ಯನ ನೆಲೆಯಲ್ಲಿ ಭರವಸೆ ನೀಡಿದರು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ನಮ್ಮ ಗೌರವಾನ್ವಿತ ಸದಸ್ಯರೂ ಹೌದು, ಹಲವಾರು ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಇಂದು ಕೂಡಾ ತಮ್ಮೊಂದಿಗೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಬಂಟರ ಸಂಘದ ಘನತೆ ಗೌರವಗಳನ್ನು ಎತ್ತಿ ಹಿಡಿಯುವಲ್ಲಿ ಅಗ್ರಗಣ್ಯ ಪಂಕ್ತಿಯಲ್ಲಿದ್ದು ಹಲವಾರು ಸೂಚನೆಗಳನ್ನು ನೀಡಿದರು.

ಆಗಮಿಸಿದ ಮುಖ್ಯ ಅತಿಥಿಗಳಿಗೆ ಸಂಘದ ವತಿಯಿಂದ ಗೌರವ ಸಮರ್ಪಣೆ ಮುಂದುವರಿದು ಸಂಘದ ಅಧ್ಯಕ್ಷ ಶ್ರೀ ಎಂ. ಮುರಲೀಧರ ಹೆಗ್ಡೆಯವರ ಸಮಯೋಚಿತ ಭಾಷಣದಲ್ಲಿ ಆಗಬೇಕಿರುವ ಕಾರ್ಯಕ್ರಮಗಳ ಸೂಕ್ಷ್ಮ ಪರಿಚಯವನ್ನಿತ್ತರು. ಶ್ರೀಮತಿ ಶ್ಯಾಮಲ ಶೆಟ್ಟಿ, ಜೊತೆ ಕಾರ್ಯದರ್ಶಿಯವರು ವಂದನಾರ್ಪಣೆ ಸಲ್ಲಿಸಿದರು.

ಮುಂದಿನ ಕಾರ್ಯಕ್ರಮ ಬಹು ನಿರೀಕ್ಷಿತ ಧಾರ್ಮಿಕ ಆಚರಣೆಗೆ ಒತ್ತು ನೀಡಿ ಕಾಂತಾರ ಚಲಚನಚಿತ್ರ ಖ್ಯಾತಿಯ ಮಾನಸಿ ಸುಧೀರ್ ತಂಡ ಸಾದರ ಪಡಿಸಿದ ನೃತ್ಯರೂಪಕ ನಾರಸಿಂಹ ನೃತ್ಯ ನಿಕೇತನ ಕೊಡವೂರು (ರಿ) ನೆರೆದ ಸಭಿಕರನ್ನು ಮಂತ್ರ ಮುಗ್ಧರನ್ನಾಗಿಸಿತು. ಸುಮಾರು 30 ನೃತ್ಯಗಾರ್ತಿಯರು, ಸುಧೀರ್ ದಿಗ್ದರ್ಶನ, ವಿಭಿನ್ನ ಬೆಳಕಿನ ಸಂಯೋಜನೆ, ಸುಶ್ರಾವ್ಯ ಸಂಗೀತದೊಂದಿಗೆ ರಂಜನೀಯವಾಗಿಯೂ ಧಾರ್ಮಿಕ ಚಿಂತನೆಯ ಲೇಪನದೊಂದಿಗೆ ನೆರೆದ ಸಭಾಸಕ್ತರಿಗೆ ಮುದ ನೀಡಿತು.

ಒಟ್ಟಿನಲ್ಲಿ ದೀಪಾವಳಿ ಸಡಗರ ಸಂತಸ ಸಡಗರದೊಂದಿಗೆ ಕರಾವಳಿಯ ವಿಶಿಷ್ಟ ಭೋಜನದ ಸವಿಯೊಂದಿಗೆ ಸದಸ್ಯ ಬಾಂಧವರ ಪ್ರಶಂಸೆಗೆ ಪಾತ್ರವಾಗಿ ಮತ್ತೊಮ್ಮೆ, ಮಗದೊಮ್ಮೆ ಇಂಥಾ ಕಾರ್ಯಕ್ರಮಗಳು ಮೂಡಿ ಬರಲಿ ಎಂಬ ಸದಾಶಯದೊಂದಿಗೆ ಕ್ಲಪ್ತ ಸಮಯದಲ್ಲಿ ಮುಕ್ತಾಯಗೊಂಡಿತು. ದೀಪಾವಳಿ ನಮ್ಮೆಲ್ಲರ ಬಾಳಿಗೆ ಹೊಸತು ಹೊಸತು ತರಲಿ.

# Congratulations



Dr. Prashanth Shetty has been awarded Karnataka State Rajyothsava Award for his remarkable contribution to the field of medical service. Currently serving as the Deputy Director of Yoga and Naturopathy College, Dr. Prashanth Shetty has displayed exceptional dedication to his profession. Bunts Sangha Bangalore congratulates and wishes him all the best.

**BUNTS' SANGHA BANGALORE**
No.324, Chord Road, Vijayanagar, Bengaluru – 560 040.
Tel.: 080-23399323 / 23399635 / 23399636

Applicant Photo

## Application for Endowment Award
## ದತ್ತಿ ನಿಧಿ ಪ್ರಶಸ್ತಿಗೆ ಅರ್ಜಿ

To,
The Hon. Secretary
Bunt's Sangha Bangalore

**Sir/ ಮಾನ್ಯರೇ,**

I We request you to consider my application for EndowmentAward/ ದತ್ತಿ ನಿಧಿ ಪ್ರಶಸ್ತಿಗೆ ನನ್ನಅರ್ಜಿಯನ್ನು ಪರಿಗಣಿಸಲು ಮನವಿ.

| | |
|---|---|
| 1.Name of the Applicant | |
| 2.Date of Birth of the Applicant | |
| 3. Contact No. | |
| 4. Fathers Name | |
| 5. Mothers Name | |
| 6. Address | |
| 7. Details of Education qualification of Applicant: | |
| Name of the Award applied for: | |
| Achievements: | |

| | | |
|---|---|---|
| Deatails of Applicants Bank A/c / ಅಭ್ಯರ್ಥಿಯ ಬ್ಯಾಂಕ್‌ಖಾತೆಯ ವಿವರಗಳು | A/c Holders Name / ಖಾತೆದಾರರ ಹೆಸರು | |
| | A/c No. ಖಾತೆ ಸಂಖ್ಯೆ | |
| | Name of the Bank ಬ್ಯಾಂಕ್ ನ ಹೆಸರು | |
| | Branch/ ಶಾಖೆ | |
| | IFSC Code/ ಐಫ್.ಎಸ್.ಸಿ. ಕೋಡ್ | |

**Signature of Applicant**
**ಅಭ್ಯರ್ಥಿಯ ಸಹಿ**
Date:

**For office use**

**Chairman,**
Scholarship & Awards Committee

# ಕರ್ನಾಟಕ ಬರೀ ನಾಡಲ್ಲ, ನಮ್ಮ ಸಂಸ್ಕೃತಿಯ ಧಾತು. ಕನ್ನಡ ಕೇವಲ ನುಡಿಯಲ್ಲ, ನಮ್ಮೊಂತರಂಗದ ಮಾತು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಮತ್ತು ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನವೆಂಬರ್ 11, 2023 ರಂದು ಆಚರಿಸಿದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ಬಿ.ಆರ್. ಲಕ್ಷ್ಮಣ್‌ರಾವ್ ಅವರು ಮಾತನಾಡಿ 'ಮನದ ಮಾತನ್ನು ಹೇಳಲು ಕನ್ನಡ ಬೇಕು. ಅದು ನಮ್ಮ ಹೃದಯದ ಭಾಷೆಯಾಗಿರಬೇಕು. ಪ್ರತಿಷ್ಠೆಯ ವ್ಯಾಮೋಹಕ್ಕೆ ಬಲಿಯಾದ ನಾವು ಸ್ವಂತಿಕೆಯನ್ನು ಮರೆತಿದ್ದೇವೆ. ದೈನಂದಿನ ವ್ಯವಹಾರಕ್ಕೆ ತಾಯ್ನುಡಿಯನ್ನು ಬಳಸಿ, ಉಳಿಸಿ' ಎಂದು ಅಭಿಮಾನವನ್ನು ವ್ಯಕ್ತಪಡಿಸಿದರು, ಸ್ವರಚಿತ ಕವನಗಳ ಸಾರವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.






ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆ ಬಳಿಕ ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ನಡೆ-ನುಡಿ, ಆಚಾರ-ವಿಚಾರಗಳಲ್ಲಿ ಕನ್ನಡ ಭಾಷೆಯನ್ನು ಬಳಸುವ ಉದ್ದೇಶದಿಂದ ನಡೆಯುವಂತಹ ಕಾರ್ಯಕ್ರಮದ ಮೂಲಕ ಮಾತೃಭಾಷಾ ಪ್ರೇಮ ಇಮ್ಮಡಿಸಲಿ, ಇಂತಹ ರಾಜ್ಯೋತ್ಸವದ ಆಚರಣೆಗಳು ಇಡೀ ರಾಜ್ಯದ ಜನತೆಗೆ ಮಾದರಿಯಾಗಲಿ ಎಂದು ಆಶಿಸಿದರು.

ಬಂಟರ ಸಂಘದ ಗೌರವ ಕಾರ್ಯದರ್ಶಿ ಹಾಗೂ ಸಂಚಾಲಕರಾದ ಶ್ರೀ ಬಿ. ಆನಂದರಾಮ ಶೆಟ್ಟಿಯವರು ಕನ್ನಡ ನುಡಿ, ಕನ್ನಡ ನೆಲದ ಹಿರಿಮೆಯನ್ನು ತಿಳಿಸಿ, ಕನ್ನಡವು ರಕ್ತಗತವಾಗಿರಬೇಕೆಂದು ಹೇಳಿದರು.

ವಿದ್ಯಾರ್ಥಿಗಳಿಂದ ಕನ್ನಡಿಗರ ಸಂಸ್ಕೃತಿ, ಸಾಹಿತ್ಯ, ಶ್ರೀಮಂತಿಕೆಯನ್ನು ತೋರುವ ಮತ್ತು ಕನ್ನಡಾಭಿಮಾನವನ್ನು ಮೂಡಿಸುವ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರದರ್ಶಿಸಲ್ಪಟ್ಟವು. ಕುಮಾರಿ। ಆರ್ನಶೆಟ್ಟಿಯವರು ಶ್ರೀ ಬಿ.ಆರ್. ಲಕ್ಷ್ಮಣ್‌ರಾವ್‌ರವರು ರಚಿಸಿದ 'ಅಮ್ಮಾ ನಿನ್ನ ಎದೆಯಾಳದಲ್ಲಿ......' ಹಾಡಿನ ಮೂಲಕ ಪ್ರೇಕ್ಷಕರ ಮನರಂಜಿಸಿದರು. ಈ ಸಂದರ್ಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಯೇಸುದಾಸ್ ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು. ಪ್ರೌಢಶಾಲಾ ವಿಭಾಗದ ಸಂಯೋಜ-ಕರಾದ ಶ್ರೀಮತಿ ಸೌಮ್ಯ ಎ ಸ್ವಾಗತಿಸಿದರು.

ಕುಮಾರಿ। ದ್ರುವ ಎಂ ವಂದಾನಾರ್ಪಣೆ ಸಲ್ಲಿಸಿದರು. ಕುಮಾರಿ। ಸಾನ್ವಿ ಎಸ್. ಮಠ, ಕುಮಾರಿ। ಜನ್ಮಿತ ಎಸ್ ಶೆಟ್ಟಿ, ಕುಮಾರಿ। ಸಂಹಿತ ಎಸ್. ರವರು ಕಾರ್ಯಕ್ರಮವನ್ನು ನಿರೂಪಿಸಿದರು.

# ಬಂಟರ ಸಂಘ ಬೆಂಗಳೂರು

## ಕ್ರೀಡಾ ವಿಭಾಗ

### ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ : 2023-24

**ಅತ್ಮೀಯ ಸದಸ್ಯರೇ,**

2023-24ನೇ ಸಾಲಿನ 'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ.

## ಕ್ರೀಡಾಕೂಟದ ವಿವರ

| | | | |
|---|---|---|---|
| ಡಿಸೆಂಬರ್ 24 ಭಾನುವಾರ | ಶಟಲ್ ಬ್ಯಾಡ್ಮಿಂಟನ್ | ಬೆಳಿಗ್ಗೆ 8.30ಕ್ಕೆ. | ಸಿಲಿಕಾನ್ ಅರ್ರೈಸ್ ಬ್ಯಾಡ್ಮಿಂಟನ್ ಅಕಾಡೆಮಿ, ಅಂಜನಾಪುರ, ಬೆಂಗಳೂರು - 560062 |
| ಜನವರಿ 6 ಮತ್ತು 7 ಶನಿವಾರ & ಭಾನುವಾರ | ಪುರುಷರ ಕ್ರಿಕೆಟ್ ಪಂದ್ಯಾಟ | ಬೆಳಿಗ್ಗೆ 8.00ಕ್ಕೆ. | ಹೆಚ್.ಎಂ.ಟಿ. ಮೈದಾನ ಜಾಲಹಳ್ಳಿ. |
| ಜನವರಿ 7 ಭಾನುವಾರ | ಮಹಿಳೆಯರ ಕ್ರಿಕೆಟ್ ಪಂದ್ಯಾಟ | ಬೆಳಿಗ್ಗೆ 8.00ಕ್ಕೆ. | ಹೆಚ್.ಎಂ.ಟಿ. ಮೈದಾನ ಜಾಲಹಳ್ಳಿ. |

ಬೆಂಗಳೂರು ಬಂಟರ ಸಂಘದ 2023-24ನೇ ಸಾಲಿನ ಎಲ್ಲಾ ವಾರ್ಷಿಕ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಕಡ್ಡಾಯವಾಗಿ ಸಂಘದ ಸದಸ್ಯರಾಗಿದ್ದು ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಹೆಗ್ಡೆ**
ಸಂಚಾಲಕರು, ಕ್ರೀಡಾ ಸಮಿತಿ
ಮೊ.: 9945685277

**ಕಿರಣ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಕ್ರೀಡಾ ಸಮಿತಿ
ಮೊ.: 9945233387

## ಶಟಲ್ ಬ್ಯಾಡ್ಮಿಂಟನ್

ಸ್ಥಳ : ಸಿಲಿಕಾನ್ ಅರ್ರೈಸ್ ಬ್ಯಾಡ್ಮಿಂಟನ್‌ಅಕಾಡೆಮಿ, ಅಂಜನಾಪುರ, ಬೆಂಗಳೂರು - 560 062
ದಿನಾಂಕ : 24.12.2023, ಭಾನುವಾರ
ಪ್ರವೇಶ ಶುಲ್ಕ : ರೂ. 200/- ಸಿಂಗಲ್ಸ್‌ಗೆ ಮತ್ತು ರೂ. 300/- ಡಬಲ್ಸ್‌ಗೆ
ಹೆಸರು ನೊಂದಾಯಿಸಲು ಕೊನೆಯ ದಿನಾಂಕ : 22.12.2023 ನೇ ಶುಕ್ರವಾರ ಸಂಜೆ 6.00ಕ್ಕೆ. ಡ್ರಾ ನಿಗದಿಯನ್ನು ಸ್ಪರ್ಧೆಯ 3 ದಿನದ ಮುಂಚೆ ತಿಳಿಸಲಾಗುವುದು.

**ವಯೋಮಿತಿ** : 15 ವರ್ಷದ ಒಳಗಿನವರಿಗೆ : ಸಿಂಗಲ್ಸ್ / ಡಬಲ್ಸ್
15-32 ವರ್ಷ ಒಳಗಿನವರಿಗೆ : ಸಿಂಗಲ್ಸ್ / ಡಬಲ್ಸ್
32-50 ವರ್ಷ ಒಳಗಿನವರಿಗೆ : ಸಿಂಗಲ್ಸ್ / ಡಬಲ್ಸ್
50 ವರ್ಷ ಮೇಲ್ಪಟ್ಟು : ಸಿಂಗಲ್ಸ್ / ಡಬಲ್ಸ್

**ಮಿಕ್ಸ್‌ಡ್‌ಡಬಲ್ಸ್** : ಎಲ್ಲಾ ವಯೋಮಿತಿಯವರಿಗೂ ಮುಕ್ತ (Open for all age groups)

**ಪಂದ್ಯದ ನಿಯಮ:**

1. ಎಲ್ಲಾ ವಯೋಮಿತಿಯ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆ.
2. ಪ್ರತಿ ವಯೋಮಿತಿಯಲ್ಲೂ ಕನಿಷ್ಠ 4 ಸ್ಪರ್ಧಿ / ತಂಡಗಳ ಪ್ರವೇಶ ಇರಲೇಬೇಕು.
3. ಪ್ರತಿಯೊಬ್ಬ ಸ್ಪರ್ಧಿಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು/ ಅಗತ್ಯವಿದ್ದಲ್ಲಿ ಜನನ ದಿನಾಂಕ ಪ್ರತಿಯನ್ನು ತೋರಿಸತಕ್ಕದ್ದು.
4. ಕಡ್ಡಾಯವಾಗಿ ಸ್ಥಳದಲ್ಲಿ ಯಾವುದೇ ಪ್ರವೇಶವನ್ನು ಸ್ವೀಕರಿಸಲಾಗುವುದಿಲ್ಲ. (No Spot Entry for both Gents and Ladies)
5. ಹೆಸರು ನಮೂದಿಸುವಾಗ ಕಡ್ಡಾಯವಾಗಿ ಸದಸ್ಯತ್ವ ಸಂಖ್ಯೆಯನ್ನು ಕೊಡತಕ್ಕದ್ದು.
6. ಡಬಲ್ಸ್ & ಮಿಕ್ಸಡ್‌ಡಬಲ್ಸ್ ಸ್ಪರ್ಧೆಗೆ ಸಂಪೂರ್ಣತಂಡದ ವಿವರವನ್ನು ನಿಗದಿಪಡಿಸಿದ ದಿನಾಂಕದೊಳಗೆ ಕೊಡಬೇಕು.

## ಕ್ರಿಕೆಟ್

ಸ್ಥಳ : ಹೆಚ್.ಎಂ.ಟಿ. ಮೈದಾನ ಜಾಲಹಳ್ಳಿ. ದಿನಾಂಕ : 06.01.2024 ಶನಿವಾರ ಮತ್ತು 07.01.2024 ಭಾನುವಾರ ಪ್ರವೇಶ ಶುಲ್ಕ – ಪುರುಷರಿಗೆ : ರೂ. 10,000/– ಪ್ರತಿ ತಂಡಕ್ಕೆ. ಪ್ರವೇಶ ಶುಲ್ಕ – ಮಹಿಳೆಯರಿಗೆ : ರೂ. 3,000/– ಪ್ರತಿ ತಂಡಕ್ಕೆ. ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 04.01.2024ನೇ ಗುರುವಾರ ಸಂಜೆ 6.00 ರ ಒಳಗೆ. ಡ್ರಾ ನಿಗದಿಯನ್ನು ಸ್ಪರ್ಧೆಯ 3 ದಿನದ ಮುಂಚೆ ತಿಳಿಸಲಾಗುವುದು

**ಪಂದ್ಯದ ನಿಯಮ:**

1. ಯಾವುದೇ ವಯೋಮಿತಿಯ ಮಾನದಂಡ ಇಲ್ಲ.
2. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯ ಬಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು.
3. ತಂಡದಲ್ಲಿ ಸಂಘದ ಸದಸ್ಯೇತರ ಆಟಗಾರರು ಕಂಡು ಬಂದಲ್ಲಿ ಯಾವುದೇ ಹಂತದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೇ ತಂಡವನ್ನು ಅನರ್ಹಗೊಳಿಸಲಾಗುವುದು ಹಾಗೂ ಅನರ್ಹಗೊಂಡ ತಂಡದ ಪ್ರವೇಶ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
4. ತಂಡದ ನೋಂದಣಿ ಮಾಡುವಾಗ ಎಲ್ಲಾ 14 ಆಟಗಾರರ ಹೆಸರು, ಸದಸ್ಯತ್ವ ಸಂಖ್ಯೆ ಮತ್ತು ದೂರವಾಣಿಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.
5. ಪ್ರತಿಯೊಂದು ತಂಡದವರು ತಮ್ಮ ಸ್ವಂತ ಬ್ಯಾಟ್‌ಗಳನ್ನು ಹೊಂದಿರಬೇಕು.
6. ಯಾವುದೇ ರೀತಿಯ ಸಲಹೆ ಸೂಚನೆ ಅಥವಾ ದೂರುಗಳಿದ್ದಲ್ಲಿ ಕ್ರೀಡಾ ಸಮಿತಿಯ ಗಮನಕ್ಕೆ ತರಬೇಕಾಗುವುದು. ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ

ಕ್ರೀಡಾ ಸಮಿತಿಯು ಕೈಗೊಳ್ಳುವ ನಿರ್ಧಾರವೇ ಅಂತಿಮ.

**ಪಂದ್ಯಾವಳಿಯ ನಿಯಾಮವಳಿಗಳನ್ನು ವೇಳಾಪಟ್ಟಿ ದಿನದಂದು ನೀಡಲಾಗುವುದು.**

**ಆನಂದರಾಮ ಶೆಟ್ಟಿ ಬಿ**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಹೆಗ್ಡೆ**
ಸಂಚಾಲಕರು, ಕ್ರೀಡಾ ಸಮಿತಿ
ಮೊ.: 9945685277

**ಕಿರಣ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಕ್ರೀಡಾ ಸಮಿತಿ
ಮೊ.: 9945233387

# Bunts' Sangha RNS Evening College Report – Industrial Visit



The students of B.Com. stream of BSRNS Evening College had an opportunity to visit to 3S products and services Unit-1 located at Vasanthanarasapura, Tumkur on 18th November, 2023 as part of their study process.

The journey began at 9:15am from our college campus and reached the venue at around 11:30am. The management of 3S products and services extended a warm welcome to us.

The students were taken to various manufacturing units where one Mr. Narendra Shetty, partner of 3S-products & services explained the process of manufacturing, punching, designing of sheet metal products, bending, welding, powder coating to prevent the metal from rusting and introducing the CNC Turret punch press, power press machinaries etc., and its functions. The students had series of questions and the personnel answered in a convincing manner. The students expressed their gratitude to each one of them directly or indirectly for enriching their theoretical learning along with their practical implications. The students returned to the campus with a sense of satisfaction.


On the whole the students spent the day on a productive note.

## Congratulations



Smt. Muktha U. Shetty has represented India in Masters Asian Games held in Phillipines on November 8th to 12th 2023, and won silver medal in 2km steeple chase, Silver Medal in 80 mtr hurdles and 4x100 mtr hurdles and 4x100 mtr relay Silver Medal. 7th place in Javellin throw and 6th place in shotput. Bunts Sangha Bangalore Congratulates and wishes her all the best.

## Congratulations



Mr. Kunal G Athikary, S/o Bala Sanadha Hosamane Dayavathi G. Athikary and Gurudath S Athikary graduated with a Gold medal In B.Tech(Electronics and Computer Engineering) from Presidency University, Bangalore on 17th November 2023. He has also completed a 6 month paid internship at Tamkang University, Taiwan. Bunts Sangha Bangalore congratulates and wishes him all the best.

# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 24ನೇ ವಾರ್ಷಿಕೋತ್ಸವದ ಕರೆಯೋಲೆ



**ಆಸ್ತಿಕ ಬಂಧುಗಳೇ,**

ಸಂಘದ ಸಂಕೀರ್ಣದಲ್ಲಿರುವ "ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ"ದ 24ನೇ ವಾರ್ಷಿಕೋತ್ಸವವನ್ನು 2024ನೇ ಜನವರಿ, 19ನೇ ತಾರೀಕು ಶುಕ್ರವಾರದಂದು ಅದ್ದೂರಿಯಾಗಿ ವಿಶೇಷ ಪೂಜಾಲಂಕಾರದೊಂದಿಗೆ ನೆರವೇರಿಸಲು ನಿಶ್ಚಯಿಸಿರುತ್ತೇವೆ.

## ಕಾರ್ಯಕ್ರಮಗಳ ವಿವರ

| | | |
|---|---|---|
| ಬೆಳಿಗ್ಗೆ 8.00 ಗಂಟೆಗೆ | : | ಅಭಿಷೇಕ ಮತ್ತು ಗಣಹೋಮ |
| ಬೆಳಿಗ್ಗೆ 10.00 ಗಂಟೆಗೆ | : | ಭಜನಾ ಕಾರ್ಯಕ್ರಮ |
| ಮಧ್ಯಾಹ್ನ 12.00 ಗಂಟೆಗೆ | : | ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಮಧ್ಯಾಹ್ನ 1.00 ಗಂಟೆಗೆ | : | ಅನ್ನಸಂತರ್ಪಣೆ |
| ಮಧ್ಯಾಹ್ನ 2.30ರಿಂದ | : | ಯಕ್ಷಗಾನ ಸಮಿತಿಯ ವತಿಯಿಂದ ಯಕ್ಷಗಾನ |

ಸಂಘದ ಸಂಕೀರ್ಣದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಭಕ್ತಾದಿಗಳಾದ ತಾವು ಕುಟುಂಬ ಸಮೇತರಾಗಿ ಆಗಮಿಸಿ ಶ್ರೀ ಮಹಾಗಣಪತಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಾ, ತಮಗೆ ಆದರದ ಸ್ವಾಗತವನ್ನು ಕೋರುವ,

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಜಯಕರ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ
ಮೊ: 9986170124

**ಕೀರ್ತನ್ ಶೆಟ್ಟಿ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ
ಮೊ: 9986170124

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾರ್ಥನಾ ಮಂದಿರದ ಸಮಿತಿ ಸದಸ್ಯರು.**

**ವಿ.ಸೂ: 'ಅಭಿಷೇಕ'** ಮಾಡಿಸುವ ಭಕ್ತಾದಿಗಳು ರೂ. 101/–ನ್ನು, **'ಗಣಹೋಮ'** ಮಾಡಿಸುವವರು ರೂ. 151/–ನ್ನು ಮತ್ತು ಶಾಶ್ವತ ಪೂಜೆ ಮಾಡಿಸುವವರು ರೂ. 1251/– ನ್ನು ಸಂಘದ ಕಛೇರಿಯಲ್ಲಿ ಅಥವಾ ದೇವಸ್ಥಾನದಲ್ಲಿ ಪಾವತಿಸಿ ರಸೀದಿ ಪಡೆಯಬೇಕಾಗಿ ವಿನಂತಿ.

# ಇತಿಹಾಸ ಸೃಷ್ಟಿಸಿದ ಬೆಂಗಳೂರು ನಮ್ಮ ಕಂಬಳ

ಕಂಬಳ ಕರ್ನಾಟಕದ ಪ್ರಭಾವಳಿ. ಇಲ್ಲಿನ ಪ್ರಮುಖ ವೃತ್ತಿ ಕೃಷಿ, 'ಕೃಷಿತೋ ನಾಸ್ತಿ ದುರ್ಭಿಕ್ಷಂ'. ನಮ್ಮ ಇಂದಿನ ಚರ್ಚಿತ ವಿಚಾರ ಕಂಬಳ. ತಾಳಿಪ್ಪಡಿ ಶಾಸನ, ಶೃಂಗೇರಿ ಶಾಸನ, ಕಲ್ಲು ಮಾಗಣೆ ಶಾಸನಗಳ ಪ್ರಕಾರ ಕಂಬಳ ಜಾನಪದ ಕ್ರೀಡೆ. ಸುಮಾರು 600 ವರ್ಷಗಳ ಇತಿಹಾಸವನ್ನು ಸಾಕ್ಷಿಭೂತ ನಿದರ್ಶನಗಳೊಂದಿಗೆ ನೀಡುತ್ತಿವೆ. ಕಂಬಳ ಸಾಮಾನ್ಯವಾಗಿ ಕೆಸರು ಗದ್ದೆಯಲ್ಲಿ ಸಾಂಪ್ರದಾಯಿಕವಾಗಿ ಪ್ರತೀ ವರ್ಷ ನಡೆಯುತ್ತಾ ಬಂದರೂ, ಆಧುನಿಕತೆಯ ಸೋಗಿನಲ್ಲಿ ಕೃಷಿಯ ಪ್ರಾದಾನ್ಯತೆ ನಶಿಸತೊಡಗಿ ಯಾಂತ್ರೀಕೃತ ಬದುಕಿಗೆ ಒಗ್ಗಿಕೊಳ್ಳುವ ಪ್ರಸಂಗ ಪ್ರಾಪ್ತವಾಯ್ತು. ಗಂಪಕಳ=ಅಂ-ದರೆ ಕೆಸರುಗದ್ದೆ. ಕೆಸರು ಮಣ್ಣಿನಿಂದ ಕೂಡಿದ ಗದ್ದೆಯಲ್ಲಿ ನಡೆಯುವುದು ಕಂಬಳ.

ಕರಾವಳಿಯಲ್ಲಿ ಒಂದು ಅಂದಾಜಿನ ಪ್ರಕಾರ 400ಕ್ಕೂ ಮೀರಿದ ವಿವಿಧ ಪ್ರಕಾರದ ಕಂಬಳಗಳು ನಡೆಯುತ್ತಿವೆ. ಹಲವು ವರ್ಷಗಳಿಂದ ರಾಜ್ಯದ ರಾಜಧಾನಿಯಲ್ಲಿ ಕಂಬಳ ಕ್ರೀಡೆಯನ್ನೂ ನಡೆಸುವ ಪರಿಚಯಿಸುವ ಪ್ರಯತ್ನಗಳು ವಿಶೇಷವಾಗಿ ತುಳುಕೂಟದಂತಹ ಸಂಘಟನೆಗಳು ಪ್ರಯತ್ನಶೀಲರಾಗಿದ್ದನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ಮುಂದಕ್ಕೆ ಕಂಬಳದ ಕಟ್ಟಾ ಅಭಿಮಾನಿ ಪುತ್ತೂರಿನ ಪ್ರಚಲಿತ ಶಾಸಕ ಅಶೋಕ ಕುಮಾರ್ ರೈಗಳು ಬೆಂಗಳೂರಿನಲ್ಲಿ ಕಂಬಳವನ್ನು ನಡೆಸುವ ನಾಯಕತ್ವವನ್ನು ವಹಿಸಿ ಬಂಜಾರ ಗ್ರೂಪಿನ ಅಧ್ಯಕ್ಷ ಶ್ರೀ ಕೆ. ಪ್ರಕಾಶ ಶೆಟ್ಟಿ ಗೌರವಾಧ್ಯಕ್ಷರಾಗಿ, ಶ್ರೀ ಗುರುಕಿರಣ್ ಕಾರ್ಯದಕ್ಷರಾಗಿ, ಶ್ರೀ ಗುರುರಂಜನ್ ಶೆಟ್ಟಿ ಬೆಳ್ಳಿಪ್ಪಾಡಿ ಉಪಾಧ್ಯಕ್ಷರಾಗಿ, ಸಂಘಟನಾ ಅಧ್ಯಕ್ಷರಾಗಿ ಶ್ರೀ ಉಮೇಶ್ ಶೆಟ್ಟಿ, ಮಾಜಿ ನಗರಸಭಾ ಸದಸ್ಯರು, ಕರಾವಳಿ ಕಂಬಳ ಸಮಿತಿ ಮುಖ್ಯಸ್ಥ ಬೆಳಪು ಶ್ರೀ ದೇವಿಪ್ರಸಾದ್ ಶೆಟ್ಟಿಯವರನ್ನು ಒಳಗೊಂಡು ಕಾರ್ಯೋನ್ಮುಖರಾದರು.

"ನ ಭೂತೋ ನಾ ಭವಿಷ್ಯತೀ' ಎಂಬಂತೆ ಬೆಂಗಳೂರು ಅರಮನೆಯ 53 ಎಕರೆ ಜಾಗವನ್ನು ಮಹಾರಾಣಿಯವರ ನೆರವಿನಿಂದ ಪಡೆದು ಪ್ರಥಮದಲ್ಲಿ ಕಂಬಳ ನಡೆಸಬೇಕಿದ್ದ ಸ್ಥಳದಲ್ಲಿನ ಅಪಾರ ಪ್ರಮಾಣದ ಕಸದ ರಾಶಿಯ ಸ್ವಚ್ಛತೆ, 3 ಕೊಳವೆ ಬಾವಿಗಳ ನಿರ್ಮಾಣ, ಜೊತೆಯಲ್ಲಿ ಹೈಟೆಕ್, ಆಫೀಸ್ ಕಛೇರಿಗಳ ನಿರ್ಮಾಣದೊಂದಿಗೆ ನಿತ್ಯ ನಿರಂತರ ನೂರಾರು ಕಾರ್ಯಕರ್ತರು ಮುಂದಾಳುಗಳು ದಿನನಿತ್ಯ ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸುತ್ತಾ ಬಂದರು. ಊರಿನಿಂದ ಕಂಬಳದ ಕರೆ ನಿರ್ಮಾಣಕ್ಕೆ ವಿಶೇಷ ತಂಡ ಆಗಮಿಸಿ ಒಂದು ತಿಂಗಳ ಕಾಲ ಜೋಡು ಕರೆ, ರಾಜ, ಮಹಾರಾಜನ ಕರೆ ನಿರ್ಮಾಣ ಕಾರ್ಯ ಯಶಸ್ವಿಯಾಯ್ತು.

ಹಲವಾರು ಸಭೆಗಳು, ಸಂಘ ಸಂಸ್ಥೆಗಳು ಒಟ್ಟಾಗಿ ಬೆಂಗಳೂರು ಕಂಬಳ ನಮ್ಮ ಕಂಬಳ ಎಂಬ ಸರ್ವ ಜನಾಂಗದ ಕಂಬಳದ ನೆಲೆಯಲ್ಲಿ ಸಾಗತೊಡಗಿತು. ಶ್ರೀ ಪ್ರಕಾಶ್ ಶೆಟ್ಟರು ತನ್ನ ಗೋಲ್ಡ್ ಫಿಂಚ್ ಹೋಟೆಲ್‌ನಲ್ಲಿ ಹಲವಾರು ಸಭೆಗಳನ್ನು, ಬಂಟರ ಸಂಘ ಬೆಂಗಳೂರಿನಲ್ಲಿ ಶ್ರೀ ಪ್ರಕಾಶ್ ಶೆಟ್ಟಿ ಮತ್ತು ಶ್ರೀ ಆರ್. ಉಪೇಂದ್ರ ಶೆಟ್ಟಿಯವರ ಸಾರಥ್ಯದಲ್ಲಿ ಬೆಂಗಳೂರಿನ ಬಂಧುಗಳ ಸಮಾಗಮ, ಕೇವ್ ಎನ್ ಡೈನ್ ಸಭಾಂಗಣದಲ್ಲಿ ಸಭೆ ಹೀಗೆ ಕಂಬಳದ ಬಗ್ಗೆ ಜನಜಾಗೃತಿ, ಪ್ರಚಾರ ಕೈಗೊಳ್ಳಲಾಯ್ತು.

ನವೆಂಬರ್ 25 ಮತ್ತು 26 ನಿಗದಿತ ಸ್ಪರ್ಧಾ ದಿನ ಊರಿನಿಂದ ಬೆಂಗಳೂರಿಗೆ ಓಟದ ಕೋಟಗಳ ಸಾಗಾಟ ಅವುಗಳಿಗೆ ತಗಲತಕ್ಕ ಖರ್ಚುವೆಚ್ಚಗಳು, ವಿಶ್ರಾಂತಿ (ದೂರದ ಪ್ರಯಾಣ) ಕಂಬಳ ಭೀಷ್ಮ, ಗುಣಪಾಲ, ಕಡಂಬ ಹಾಗೂ ಸ್ನೇಹಿತರು, ಶಾಸಕರು ಜೊತೆ ಸೇರಿ ಓಟದ ಕೋಣದ ಯಜಮಾನರಿಗೆ ಆಹ್ವಾನ ನೀಡಿ ಸಂಘಟಿಸಿದರು. ಗೇಟ್ ನಂ. 5 ರಿಂದ ಪ್ರವೇಶ. ಹಲವಾರು ವೇದಿಕೆಗಳ ನಿರ್ಮಾಣ, ಓಟದ ಕೋಣಗಳಿಗೆ ಟೆಂಟ್ ವ್ಯವಸ್ಥೆ, ಆಹಾರ ಮಳಿಗೆಗಳ ನಿರ್ಮಾಣ ಎಲ್ಲವನ್ನೂ ಸಂಘಟಕರು ಅಚ್ಚುಕಟ್ಟಾಗಿ ಮಾಡುವುದರ ಜೊತೆಗೆ ಸುಮಾರು 8000 ವಾಹನಗಳ ನಿಲುಗಡೆಗೆ 3 ಸಭಾಭವನಗಳನ್ನು ಒಳಗೊಂಡಂತೆ ಮಾಡಿರುವುದು ಶ್ಲಾಘನೀಯ. ಸರಕಾರದ ಸಂಪೂರ್ಣ ಸಹಕಾರ ವಿಶೇಷವಾಗಿ ಶ್ರೀ ಡಿ.ಕೆ. ಶಿವಕುಮಾರ್ ಗೌರವಾಧ್ಯಕ್ಷರಾಗಿ ಪೂಜಾ ವಿಧಿ ವಿಧಾನಗಳಲ್ಲಿ ಭಾಗಿಯಾಗಿ ಸಹಕಾರ ನೀಡಿ ಪ್ರೋತ್ಸಾಹಿಸಿದರು. ಕಂಬಳದಲ್ಲಿ ಹಗ್ಗ, ನೇಗಿಲು, ಅಡ್ಡ ಹಲಗೆ, ಕನಹಲಗೆ ಎನ್ನುವ ನಾಲ್ಕು ಸ್ವರೂಪದ ಓಟಗಳಿವೆ. ಜಾತಿ ಮತ ಬೇಧಗಳನ್ನು ರಾಜಕೀಯದಿಂದ ದೂರಸರಿದು ಕ್ರೀಡಾ ಮನೋಭಾವದೊಂದಿಗೆ ಸರ್ವ ಬಂಧುಗಳ ಜೊತೆಯಲ್ಲಿ ಕರಾವಳಿಯ ಕಂಪನ್ನು ರಾಜ್ಯದ ರಾಜಧಾನಿಯಲ್ಲಿ ಅನಾವರಣಗೊಳಿಸಬೇಕಾದ ಅತಿದೊಡ್ಡ ಸವಾಲನ್ನು ಕಂಬಳ ಸಮಿತಿ ಅತ್ಯಂತ ನಾಜೂಕಾಗಿ ನಡೆಸಿ ಯಶಸ್ವಿಯಾಗಿದೆ.

ಕಂಬಳದ ಉದ್ಘಾಟನೆ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ನಡೆಸಿಕೊಟ್ಟರು. ಹೆಚ್ಚಿನ ಸಂಖ್ಯೆಯಲ್ಲಿ ರಾಜಕಾರಣಿಗಳು ಪಕ್ಷಬೇಧ ಮರೆತು ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಸಿ.ಟಿ. ರವಿ, ಶ್ರೀ ವಿಜಯೇಂದ್ರ, ಶ್ರೀ ಸದಾನಂದ ಗೌಡರು, ಶ್ರೀ ಪಿ.ಸಿ. ಮೋಹನ್ ಹಾಗೆಯೇ ಶ್ರೀ ಯು.ಟಿ. ಖಾದರ್, ಶ್ರೀ ಮಂಜುನಾಥ ಭಂಡಾರಿ, ಶ್ರೀ ಹ್ಯಾರಿಸ್, ಇತರ ಮುಖಂಡರೂ ಜೊತೆಗೂಡಿ ಪ್ರತಾಪ್ ಶ್ರೀ ಮಧುಕರ ಕಾಮತ್, ಆಭರಣ ಜ್ಯುವೆಲ್ಸ್ ಸಮಾರಂಭಕ್ಕೆ ಮೆರುಗು ನೀಡಿದರು. ಚಲನಚಿತ್ರ ನಟ ನಟಿಯರ ದಂಡೇ ಸಮಾರಂಭದ ಎರಡು ದಿನವೂ ವೇದಿಕೆಯಲ್ಲಿ ಕಾಣಿಸುತ್ತಿತ್ತು.

**ಕಂಬಳದ ವಿಶೇಷಗಳು:** ಅರಮನೆಯಲ್ಲಿ ಪ್ರಥಮ ಕಂಬಳ ಸುಮಾರು 53 ಎಕ್ರೆ ಪ್ರದೇಶದಲ್ಲಿ ಕಂಬಳ 154 ಜೊತೆ ಕೋಣಗಳ ಸ್ಪರ್ಧೆ, ಅಚ್ಚು ಕಟ್ಟಾದ ವಾಹನ ನಿಲುಗಡೆ, ಪ್ರೇಕ್ಷಕರ ಗ್ಯಾಲರಿ, ಆಹಾರ ಮಳಿಗೆಗಳು, 203 ಮೆಡಲ್ ಗೆದ್ದ ಪಾಂಡು ಕೋಣ–ನಂದಳಿಕೆ ಶ್ರೀಕಾಂತ್ ಭಟ್ ಯಜಮಾನ. 100 ಮೀಟರ್ ಓಟವನ್ನು 8.78 ಸೆಕೆಂಡ್‌ನಲ್ಲಿ ಕ್ರಮಿಸಿ ದಾಖಲೆ ನಿರ್ಮಿಸಿದ ಶ್ರೀನಿವಾಸ ಗೌಡ ಓಟದ ಕಣದಲ್ಲಿ ವಿಜೇತರಿಗೆ ಬಂಗಾರದ ಪದಕ ಜೊತೆಗೆ ಲಕ್ಷ ರೂಗಳ ಕೊಡುಗೆ.

ಕಂಬಳದ ಜೊತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ವಿಶೇಷ ನಿರ್ಮಿತ ವೇದಿಕೆಯಲ್ಲಿ ಅರ್ಜುನ್ ಜನ್ಯ, ಅನುಶ್ರೀ, ಗುರುಕಿರಣ್, ಶಮಿತಾ ಮಲ್ನಾಡ್‌ರ ಸಹಕಾರದೊಂದಿಗೆ ಜನಮನ ಸೂರೆಗೊಂಡರೆ, ಹುಲಿವೇಷ, ಕಂಗೀಲು ನೃತ್ಯ ಯಕ್ಷಗಾನ ಹೀಗೆ ಮನರಂಜನಾ ಕಾರ್ಯಕ್ರಮಗಳೊಂದಿಗೆ ದೊಡ್ಡ ಹಬ್ಬವೇ ನಡೆದು ಹೋಯ್ತು.

ಬೆಂಗಳೂರಿನಲ್ಲಿ ಕಂಬಳ ಸಂಘಟನೆ ಸಂಯೋಜನೆಯಲ್ಲಿ ಸಂಪನ್ಮೂಲಗಳಿಗೆ ಸಹಕರಿಸಿದ ಮಹನೀಯರು ಅಭಿನಂದನಾರ್ಹರು. ಈ ಭಾಗದಲ್ಲಿ ಕಂಬಳ ಬೆಳೆಯುವುದಕ್ಕೆ ಕಂಬಳದ ವ್ಯವಸ್ಥಾಪಕರು, ಓಟದ ಕೋಣದ ಮಾಲೀಕರು, ತುಂಬು ಹೃದಯದ ಸಹಕಾರ ನೀಡಿದ ಮಾಧ್ಯಮ ಮಿತ್ರರು, ಸಕಾಲಿಕ ನೆರವು ಮತ್ತು ಪ್ರಚಾರ, ಕಂಬಳ ಅಭಿಮಾನಿಗಳ ಪ್ರೋತ್ಸಾಹ, ಸುಮಾರು 7 ಲಕ್ಷದಿಂದ 8 ಲಕ್ಷದವರೆಗೆ ಎರಡು ದಿನಗಳಲ್ಲಿ ಅಭಿಮಾನಿಗಳು ಕಂಬಳ ವೀಕ್ಷಣೆ ಮಾಡಿರುವುದು ವಿಶೇಷ. ಕಂಬಳ ಕೇವಲ ಓಟದ ಕೋಣಗಳಿಗೆ ಸ್ಪರ್ಧೆಯಾಗದೆ ಕರಾವಳಿಯ ರೈತನ ಬದುಕಿನ ಸಾಂಸ್ಕೃತಿಕ ನೆಲೆಗಟ್ಟಾದ ಸಂರಕ್ಷಣೆಯ ತಾಯಿ ಬೇರಾಗಿ ಹತ್ತು ಹಲವು ಆಚರಣೆ ಆರಾಧನೆ ಮತ್ತು ನಂಬಿಕೆಗಳಿಗೆ ಪ್ರೇರಕವೂ, ಪೂರಕವೂ ಆದ ಶಕ್ತಿಯಾಗಿದೆ. ಬೆಂಗಳೂರು ಕಂಬಳದಲ್ಲಿ ಹಲವಾರು ಧಾರ್ಮಿಕ ವಿಧಿ ವಿಧಾನಗಳಿಗೆ ಒತ್ತು ನೀಡಲಾಗಿತ್ತು.

ಹೊನಲು ಬೆಳಕಿನ ಕಂಬಳ ಜನಮಾನಸದಲ್ಲಿ ಸಂತಸ, ಸಂತೃಪ್ತಿ ಜೊತೆಗೆ ಹೊಸತನದ ಪ್ರದರ್ಶನ ನಡೆದು ಜಾನಪದ ಕ್ರೀಡೆ ಮನೆ ಮಾತಾಗುವಂತೆ ಕಾರ್ಯಕ್ರಮ ರೂಪಿಸಿ ಯಶಸ್ವಿಯಾದ ತಂಡಕ್ಕೆ ಅಭಿನಂದನೆಗಳು.

**– ಡಿ. ಚಂದ್ರಹಾಸ ರೈ**

# ಅಭಿನಂದನೆಗಳು



ನಮ್ಮ ಸಂಘದ ಸದಸ್ಯರಾದ ಶ್ರೀ ಕೆ. ಪ್ರಸನ್ನ ಶೆಟ್ಟಿಯವರು ಪ್ರತಿಷ್ಠಿತ ಲೋಕಾಯುಕ್ತ ವಿಶೇಷ ಅಭಿಯೋಜಕರಾಗಿ (ಎಸ್.ಪಿ.ಪಿ) ನೇಮಕಗೊಂಡಿದ್ದಾರೆ. ಉಡುಪಿಯ ವೈಕುಂಠ ಬಾಳಿಗ ಲಾ ಕಾಲೇಜಿನಲ್ಲಿ ಪದವಿ ಮುಗಿಸಿ ಪ್ರಖ್ಯಾತ ವಕೀಲರಾದ ಶ್ರೀ ಶಶಿಕಿರಣ್ ಶೆಟ್ಟಿಯವರ ಮಾರ್ಗದರ್ಶನದಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿರುತ್ತಾರೆ. ಸುಮಾರು 20 ವರ್ಷಗಳಿಂದ ಉಚ್ಚ ನ್ಯಾಯಾಲಯದ ವಕೀಲರಾಗಿ ಹಲವು ಖಾಸಗಿ ಸಂಸ್ಥೆಗಳ ಕಾನೂನು ಸಲಹೆಗಾರರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು ನಿವೃತ್ತ ಮುಖ್ಯೋಪಾಧ್ಯಯ ಕೆಂಜೂರು ಬಕ್ಕಾರಿಮನೆ ಶ್ರೀ ರತ್ನಾಕರ ಶೆಟ್ಟಿ ಮತ್ತು ಕಾವಡಿ ಶ್ರೀಮತಿ ಭಾಗೀರತಿ ಆರ್. ಶೆಟ್ಟಿಯವರ ಸುಪುತ್ರ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಬಂಟರ ಸಂಘ ಬೆಂಗಳೂರು

## ಸಾಂಸ್ಕೃತಿಕ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ : 2023-24

**ಸ್ಥಳ : ಬಂಟರ ಸಂಘದ ಆವರಣ, ದಿನಾಂಕ : 17.12.2023, ಭಾನುವಾರ, ಬೆಳಿಗ್ಗೆ 09.30 ರಿಂದ,**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 15.12.2023**

**1. ಛದ್ಮವೇಷ (FANCY DRESS):**
(ಹಿನ್ನೆಲೆ ಧ್ವನಿ / ಸಂಗೀತವನ್ನು ಪರಿಗಣಿಸಲಾಗುವುದು)
ವಯೋಮಿತಿ : ಕಾಲಾವಕಾಶ : 2 ನಿಮಿಷ
ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ) 16 ವರ್ಷ ಮೇಲ್ಪಟ್ಟು

**2. ಆಶು ಭಾಷಣ (PICK & SPEECH)– ಕನ್ನಡ/ English :** ವಯೋಮಿತಿ : ಕಾಲಾವಕಾಶ : 2 ನಿಮಿಷ
ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ
ಡಿ) 30 ವರ್ಷ ಮೇಲ್ಪಟ್ಟು (ಕಾಲಾವಕಾಶ 3 ನಿಮಿಷ)

### ಮಧ್ಯಾಹ್ನ 2.00 ರಿಂದ

**1. ರಂಗೋಲಿ (ಚುಕ್ಕಿ ರಂಗೋಲಿ) (Powder) :**
ವಯೋಮಿತಿ : ಕಾಲಾವಕಾಶ : 60 ನಿಮಿಷ
ಎ) 16 ವರ್ಷದ ಒಳಗೆ
ಬಿ) 16 ವರ್ಷ ಮೇಲ್ಪಟ್ಟು
* ಸ್ಪರ್ಧಿಗಳ ಸಂಖ್ಯೆ 6 ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವಯೋಮಿತಿಯನ್ನು ಮುಕ್ತ ಎಂದು ಪರಿಗಣಿಸಲಾಗುವುದು

**2. ಚಿತ್ರ ಬಿಡಿಸುವುದು (DRAWING) :**
ವಯೋಮಿತಿ : ಕಾಲಾವಕಾಶ : 45 ನಿಮಿಷ
ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ) 16 ವರ್ಷ ಮೇಲ್ಪಟ್ಟು

**ಹೆಚ್ಚಿನ ಮಾಹಿತಿಗಾಗಿ :–**

**ಸಂಘದ ಕಛೇರಿ: 080–23399323 / 7022119739**

| | | | |
|---|---|---|---|
| ಅನುರಾಧ ಎ. ಶೆಟ್ಟಿ | : 99807 69129 | ಅನುಸೂಯ ಶೆಟ್ಟಿ | : 98444 30362 |
| ಆತ್ಮರಾಮ ಆಳ್ವ | : 90082 87507 | ಕಾರ್ತಿಕ್ ಶೆಟ್ಟಿ | : 95356 16575 |
| ಪ್ರಸಾದ್ ಶೆಟ್ಟಿ | : 96630 05588 | ಸಚಿನ್ ಶೆಟ್ಟಿ | : 77602 31093 |
| ಸಬಿತ ಎ. ಮಲ್ಲಿ | : 92431 26335 | ಸಂದೀಪ್ ಹೆಗ್ಡೆ | : 99459 35494 |
| ಸಂತೋಷ್ ಶೆಟ್ಟಿ | : 90354 29265 | ಸಂತೋಷ್ ಶೆಟ್ಟಿ | : 98452 13876 |
| ಶೋಭಾ ಎಸ್. ಶೆಟ್ಟಿ | : 93432 35050 | ಶರತ್ ಶೆಟ್ಟಿ | : 97405 42476 |
| ಶಶಿಧರ್ ಶೆಟ್ಟಿ | : 63638 65719 | ಸುಖಲತಾ ಶೆಟ್ಟಿ | : 92430 80987 |
| ಸುವೀಕ್ಷಾ ಶೆಟ್ಟಿ | : 95388 50360 | | |

- ಎಲ್ಲಾ ಸ್ಪರ್ಧೆಗಳು ನಿಗದಿಪಡಿಸಿದ ಸಮಯದಲ್ಲೇ ನಡೆಯುವುದು. ಸ್ಪರ್ಧಿಗಳು ನಿಗದಿಪಡಿಸಿದ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ತಮ್ಮ ಹಾಜರಾತಿಯನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.
- ಯಾವುದೇ ಸ್ಪರ್ಧೆಗಳಿಗೆ ಪ್ರವೇಶ ಶುಲ್ಕ ಇರುವುದಿಲ್ಲ.
- ನಿಗದಿತ (ಕೊನೆಯ) ದಿನಾಂಕದ ನಂತರ ಬಂದ ನೋಂದಣಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಸ್ಪರ್ಧೆಯ ದಿನದಂದು ಯಾವುದೇ ರೀತಿಯ ನೋಂದಾವಣೆ ಇರುವುದಿಲ್ಲ. ಸ್ಪರ್ಧೆ ತಡರಾತ್ರಿಯವರೆಗೆ ನಡೆದು ಸ್ಪರ್ಧಿಗಳಿಗೆ ಹಾಗೂ ತೀರ್ಪುಗಾರರಿಗೆ ಅನಾನುಕೂಲವಾಗದಂತೆ ಮಾಡಲು ನಿಗದಿತ ದಿನಾಂಕದ ಮೊದಲು ನೋಂದಣಿ ಕಡ್ಡಾಯ.
- ಯಾವುದೇ ಸ್ಪರ್ಧೆಯಲ್ಲಿ ಮೂರು ಸ್ಪರ್ಧಿಗಳು ಮತ್ತು ಅದಕ್ಕಿಂತ ಕಮ್ಮಿ ಇದ್ದರೆ ಒಂದು ಬಹುಮಾನ, ಮೂರರಿಂದ ಆರು ಸ್ಪರ್ಧಿಗಳು ಭಾಗವಹಿಸಿದ್ದಲ್ಲಿ ಕೇವಲ ಎರಡು ಬಹುಮಾನಗಳು ಮತ್ತು ಆರಕ್ಕಿಂತ ಹೆಚ್ಚು ಸ್ಪರ್ಧಿಗಳು ಇದ್ದಲ್ಲಿ ಮೂರು ಬಹುಮಾನ ನೀಡಲಾಗುವುದು.

**ಈ ಎಲ್ಲಾ ಸ್ಪರ್ಧೆಗಳಿಗೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಮಹೇಶ್ ಶೆಟ್ಟಿ, ಬೈಲೂರು**
ಸಂಚಾಲಕರು, ಸಾಂಸ್ಕೃತಿಕ ಸಮಿತಿ
ಮೊ.: 99809 51966

**ಜಯಶ್ರೀ ಸಿ. ರೈ**
ಚೇರ್‌ಮೆನ್, ಸಾಂಸ್ಕೃತಿಕ ಸಮಿತಿ
ಮೊ.: 99459 99255

## ಅಭಿನಂದನೆಗಳು



ಬೆಂಗಳೂರು ಸಿಟಿ ಪೊಲೀಸ್ ಕಮಿಷನರ್ ಶ್ರೀ ಬಿ. ದಯಾನಂದ ಐಪಿಎಸ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ 26.11.2023 ಭಾನುವಾರದಂದು ಎಚ್.ಎನ್. ಆಡಿಟೋರಿಯಂ, ಜ್ಞಾನಭಾರತಿ ಆವರಣದಲ್ಲಿ ನಡೆದ ಮಾಸಿಕ ಜನಸಂಪರ್ಕ ದಿವಸ ಸಭೆಯಲ್ಲಿ ಅಪರಾಧಗಳನ್ನು ತಡೆಗಟ್ಟಲು ಪೊಲೀಸರೊಂದಿಗೆ ಉತ್ತಮ ಸಹಕಾರ ನೀಡಿದ ಶ್ರೀ ಚಂದ್ರಶೇಖರ್ ಶೆಟ್ಟಿ ಎಸ್. ಕಾಮಾಕ್ಷಿಪಾಳ್ಯರವರನ್ನು ಬೆಂಗಳೂರು ಸಿಟಿ ಪೊಲೀಸ್ ಕಮಿಷನರ್ ಶ್ರೀ ಬಿ. ದಯಾನಂದ್ ಐಪಿಎಸ್‌ರವರು ಪ್ರಶಂಸಾ ಪತ್ರವನ್ನು ನೀಡಿ ಅಭಿನಂದ ಪೂರಕವಾಗಿ ಅಭಿನಂದಿಸಿದರು. ಇವರಿಗೆ ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

## ಅಭಿನಂದನೆಗಳು



ಕಳೆದ 23 ವರ್ಷಗಳಿಂದ ಕತರ್ ದೇಶದಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಉಡುಪಿ ಜಿಲ್ಲೆಯ ಕೊಲ್ಲೂರು ಸಮೀಪದ ಚುಚಿಯ ಶ್ರೀ ದೀಪಕ್ ಶೆಟ್ಟಿ ಅವರಿಗೆ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಕರ್ನಾಟಕ ಸಂಘ ಕತರ್ ಇದರ ಅಧ್ಯಕ್ಷರಾಗಿ ಇವರು ಹಲವಾರು ಕನ್ನಡ ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ಹೊರದೇಶದಲ್ಲಿ ಕನ್ನಡ ಬೆಳೆಸಲು ಸಾಕಷ್ಟು ಶ್ರಮ ವಹಿಸಿದ್ದಾರೆ. ಬಂಟ್ಸ್ ಕತಾರ್ ಮಾಜಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಇವರನ್ನು ಅಲ್ಲಿನ ರಾಯಭಾರಿ ಕಚೇರಿಯು ಎರಡು ಬಾರಿ ಭಾರತೀಯ ಸಾಂಸ್ಕೃತಿಕ ಕೇಂದ್ರದ ಸಲಹಾ ಮಂಡಳಿಗೆ ನಾಮನಿರ್ದೇಶನ ಮಾಡಿತು. ಪ್ರಸ್ತುತ ಇವರು ಭಾರತೀಯ ರಾಯಭಾರಿ ಕಚೇರಿಯ ಅಧೀನದಲ್ಲಿರುವ ಇಂಡಿಯನ್ ಕಮ್ಯುನಿಟಿ ಬೆನೆವೊಲೆಂಟ್ ಫೋರಂನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಅಭಿನಂದನೆಗಳು.

# ಕಟೀಲುಶ್ರೀ ದುರ್ಗಾಪರಮೇಶ್ವರಿ ಜ್ಯೋತಿಷ್ಯ ಪೀಠ

ಪ್ರಧಾನ ತಾಂತ್ರಿಕ ಶ್ರೀ ಶ್ರೀ ವಿಜಯೇಂದ್ರ ಭಟ್

ದೈವ ಪ್ರಶ್ನೆ ಅಷ್ಟಮಂಗಳ ಪ್ರಶ್ನೆ ಜಾತಕ ಹಸ್ತ ಫೋಟೋ ನೋಡಿ
ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ

**ನಿಮ್ಮ ಸಮಸ್ಯೆ ಏನೇ ಇರಲಿ ಕೇರಳಿಯ ಯಂತ್ರ ಮಂತ್ರ ತಾಂತ್ರಿಕ ವಿಧಿ ವಿಧಾನಗಳಿಂದ ಶ್ರೀ ಕಟೀಲು ದುರ್ಗಾಪರಮೇಶ್ವರಿ ಅನುಗ್ರಹದಿಂದ. 5 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ**



ಶ್ರೀ ಕಟೀಲು ದುರ್ಗಾಪರಮೇಶ್ವರಿ ದೇವಿ ಆರಾಧಕರು

ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ **99452 22228**

**ಮನೆಯಲ್ಲಿ ಅಶಾಂತಿ ಮಾನಸಿಕ ಕಿರಿಕಿರಿ ವಿದ್ಯಾಭ್ಯಾಸದಲ್ಲಿ ತೊಂದರೆ ಮದುವೆ ಯೋಗ ಬೇಗನೆ ಕೂಡಿಬರಲು ಸ್ತ್ರೀ ಪುರುಷ ಪ್ರೇಮ ಆಕರ್ಷಣ ಸಿದ್ದಿ ದೂರವಾಗಿರುವ ಪತಿ ಪತ್ನಿ ಒಂದಾಗಲು ಡೈವರ್ಸ್ ಸಮಸ್ಯೆ ಸಂತಾನ ಲೈಂಗಿಕ ದೋಷ ಹಣಕಾಸಿನ ಸಮಸ್ಯೆಯಿಂದ ಮುಕ್ತಿ ಪಡೆಯಲು ಶತ್ರುಗಳು ಮೆತ್ತಗಾಗಿ ಮೂಲೆ ಸೇರಲು ಉದ್ಯೋಗ ವ್ಯಾಪಾರದಲ್ಲಿ ಪ್ರಗತಿ ಹೊಂದಲು ಮಾಟ ಮಂತ್ರ ವಶೀಕರಣ ನಿವಾರಣೆ ಅತ್ತೆ ಸೊಸೆ ಕಲಹ ಅದೃಷ್ಟ ಪ್ರಾಪ್ತಿ ಸಮಸ್ಯೆ ಯಾವುದೇ ಇರಲಿ ಪರಿಹಾರ ಶತಸಿದ್ಧ**


ಸ್ಥಳ :- ಕೆ ಎಸ್ ರಾವ್ ರೋಡ್, ಮಂಗಳೂರು ಹಾಗು
ಡಿವಿಜಿ ರೋಡ್ ಬೆಂಗಳೂರು

ADVT.

**Om Namo Bhagwate Nityananda Namaha**

## *Forever in Our Hearts*

4th August, 1922



31st December, 2022

*Centenarian*

# Kaup Padu Doddamane Jagannath B. Shetty

*Human greatness does not lie in wealth or power, but in character and goodness.*
*His legacy of love and kindness will live on in our hearts and in those who knew him.*

*We love you and will always miss your presence.*
*We are proud to have been born in the same era as you.*
*To have known, love, cherished and followed you.*
*We pray your legacy continues to guide us in our journey ahead.*

***Blessed by Your Parents,***
*Late Smt. Durgi Shetty and Late Shri Boodha Shetty*

***Fondly Loved, Remembered and Deeply missed by***
***Your loving wife***
*Smt. Sarojini Jagannath Shetty*

***Children***

*Late Dr. Vinod & Sheela Shetty*
*Lalitha and Dr. Rajmohan Shetty*
*Narendra & Jyoti Shetty*
*Dr. Vijayalakshmi & Ratnakar Shetty*

***Grandchildren***

*Pooja & Siddharth, Vrishika*
*Nirman & Seema, Gautam & Shrithi*
*Sanesha, Tanish*
*Dr. Akshita & Dr. Gautham, Uttarika*

***Great Grandchildren***
*Vivanya, Tanaya, Sahasya, Niyara, Shlok, Arya, Ved*

*The Entire Family of*
*Kaup Padu Doddamane*
*Kuthpady Moodbettu Padumane*
*Relatives & Friends.*

*New Vasant Health Home, Mumbai*
*Vinod Refreshments, Mumbai*
*Hotel Saroja, Bangalore*

ADVT.

# ಶ್ರದ್ಧಾಂಜಲಿ



ಡಾ. ಚಂದ್ರಶೇಖರ್ ಶೆಟ್ಟಿ ಕೊಳ್ಕೆಬೈಲ್
ಸದಸ್ಯತ್ವ ಸಂಖ್ಯೆ: CL000125

ಕೊಳ್ಕೆಬೈಲ್ ಡಾ. ಚಂದ್ರಶೇಖರ್ ಶೆಟ್ಟಿಯವರು ದಿನಾಂಕ 07.11.2023ರಂದು ತಮ್ಮ 91ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಬನ್ನಂಪಳ್ಳಿ ಶ್ರೀಮತಿ ಸುಹಾಸಿನಿ ಸಿ. ಶೆಟ್ಟಿ, ಇಬ್ಬರು ಪುತ್ರಿಯರು, ಇಬ್ಬರು ಪುತ್ರರು, ಇಬ್ಬರು ಸಹೋದರಿಯರು, ಐದು ಜನ ಮೊಮ್ಮಕ್ಕಳು, ನಾಲ್ಕು ಜನ ಮರಿ ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀ ಮುಲ್ಕಿ ನಾರಾಯಣ ಶೆಟ್ಟಿ
ಸದಸ್ಯತ್ವ ಸಂಖ್ಯೆ: CL000389

ಬೆಂಗಳೂರು ಬಂಟರ ಸಂಘದ ದಾನಿಗಳು ಮುಲ್ಕಿ ಶ್ರೀ ನಾರಾಯಣ ಶೆಟ್ಟಿಯವರು ದಿನಾಂಕ 16.11.2023ರಂದು ತಮ್ಮ 83ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಸಟ್ವಾಡಿ ಶ್ರೀಮತಿ ಸುಜಾತ ಎನ್. ಶೆಟ್ಟಿ, ಇಬ್ಬರು ಪುತ್ರಿಯರು, ಐದು ಜನ ಸಹೋದರಿಯರು, ಆರು ಜನ ಮೊಮ್ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀಮತಿ ಪ್ರಮೋದ ಬಿ. ರೈ
ಸದಸ್ಯತ್ವ ಸಂಖ್ಯೆ: CL006808

ಪೆರಾರ ಬ್ರಾಣಬೆಟ್ಟು ಶ್ರೀಮತಿ ಪ್ರಮೋದ ಬಿ. ರೈಯವರು ದಿನಾಂಕ 23.11.2023ರಂದು ತಮ್ಮ 72ನೇ ವಯಸ್ಸಿನಲ್ಲಿ ನಿಧನರಾದರು. ಇವರು ಇಬ್ಬರು ಪುತ್ರರು, ಓರ್ವ ಪುತ್ರಿ, ನಾಲ್ಕು ಜನ ಮೊಮ್ಮಕ್ಕಳು, ಮೂವರು ಸಹೋದರಿಯರು, ಮೂವರು ಸಹೋದರರರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.


PILGRIMAGE TOUR TO VARANASI-PRAYAGRAJ-
AYODHYA WITH VIP DARSHAN AT
NEWLY BUILT RAM JANMABHUMI TEMPLE.
5 NT / 6 DAYS TOUR
FROM 1ST MARCH TO 6TH MARCH 2024
FROM 15TH MARCH TO 20TH MARCH 2024
FROM 27TH MARCH TO 1ST APRIL 2024
HIGHLIGHTS: VARANASI-Kashi Vishwanath Temple, Holy Ganga Ghats Aarti, Kala Bhairav Temple, Prayagraj - Sita Madi, Triveni Sangam, Ayodhaya - Newly Built Ram Janmabhumi Temple, Nageshwarnath Temple, Hanuman Ghadi, Kanak Bhavan.
PACKAGE COST INR 45000/- PER PERSON - ALL INCLUSIVE - EX-MUMBAI
Cost Includes : Airfare from Mumbai to Varanasi & from Ayodhya to Mumbai or from Lucknow to Mumbai Accommodation: 2Nt Varanasi, 1Nt Prayagraj, 2Nt Ayodhya with all meals. All transfers & sightseeing by AC Coach. Group accompanied by experienced Tour Manager. Cost excludes: All expenses of personal nature.
For any further details please contact:
IATA Approved
Canara Tours & Travels Pvt. Ltd
....... good people to travel with
Mr. S. B. Shetty – 9820510043
101, Udyog Kshetra, L.B.S. Marg, Off Link Road, Mulund (W), Mumbai-80. | Tel.: 41115000 | Fax : 41115005
Mr. T. T. Mada – 9820632934
2, Srishti Complex, Opp. L & T Gate No.7, Saki Vihar Rd., Powai, Mumbai-72. Tel. : (022) 42215000
Fax : 91-22-28571468 E-mail : info@canaratravels.com | Website : www.canaratravels.com
Mr. Prabhat Shetty - 9481950340
204, Kirthi Sagar, Vidyaratnanagar Manipal - 576104
Mr. Varun Mallya - 9480744833
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06
Mr. Suresh Ajila 09448089189 (Bangalore)

ADVT.

ಸ್ಥಾಪನೆ: 1997

ದೂರವಾಣಿ : 23393444
ಮೊಬೈಲ್ : 8722006082

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

# Vijaya Pathina Souharda Sahakari Niyamitha

ನಂ 5, ಎಸ್.ಜಿ. ಎಲಿಗೆನ್ಸ್, 4ನೇ ಮಹಡಿ, ಚಂದ್ರ ಲೇಔಟ್ ಮುಖ್ಯ ರಸ್ತೆ, ಇನ್‌ಕಮ್‌ಟ್ಯಾಕ್ಸ್ ಲೇಔಟ್, ವಿಜಯನಗರ, ಬೆಂಗಳೂರು – 560 040.

**Email : vijaya_souharda@yahoo.in, vijayasouharda@rediffmail.com**

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದ್ದು, 25 ಸಂವತ್ಸರಗಳನ್ನು ಮುಗಿಸಿರುವುದು ಸಂತೋಷದಾಯಕ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿ ದರವನ್ನು ನೀಡಲಾಗುತ್ತಿದೆ. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

**ಸಾಲಗಳು**

- ಜಾಮೀನು ಸಾಲ : ರೂ. 50,000.00
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿನಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ ಮತ್ತು ನಿವೇಶನ ಖರೀದಿ ಸಾಲ : 1 ಲಕ್ಷದಿಂದ 60 ಲಕ್ಷ – 120 ತಿಂಗಳು ಗರಿಷ್ಠ

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು 13%**

2016–17 ರಿಂದ ಸತತವಾಗಿ 15% ಹಾಗೂ 2020 –2021ರಲ್ಲಿ 12% ಮತ್ತು 2021–2022 ರಲ್ಲಿ 13%

ವಾರ್ಷಿಕ ಡಿವಿಡೆಂಡ್ ವಿತರಣೆ

ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ

**ವ್ಯವಹಾರದ ವೇಳೆ :**

| ಸೋಮವಾರದಿಂದ | ಬೆಳಿಗ್ಗೆ | ಸಾಯಂಕಾಲ |
|---|---|---|
| ಶುಕ್ರವಾರದವರೆಗೆ | 9–30 ರಿಂದ 1–00 | 2–00 ರಿಂದ 6–00 |
| ಶನಿವಾರ | 9–30 ರಿಂದ 1–00 | ರಜಾ |
| ಭಾನುವಾರ | ವಾರದ ರಜಾ ದಿನ | |

**ನಿರ್ದೇಶಕರುಗಳು**

ಶ್ರೀ ಕೆ. ಭಗವಾನ್‌ದಾಸ್ ರೈ
ಶ್ರೀ ಡಿ. ಚಂದ್ರಹಾಸ್ ರೈ
ಶ್ರೀ ಟಿ. ಎನ್. ಶಿವಾನಂದ ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ
ಶ್ರೀ ಬಿ. ಸಂತೋಷ್ ಕುಮಾರ್ ಶೆಟ್ಟಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ

ಕಾರ್ಯದರ್ಶಿ – ಶ್ರೀ ಕೆ. ಆರ್. ಶೇಷಾದ್ರಿ

**ಸ್ಥಾಪಕ ಅಧ್ಯಕ್ಷರು : ದಿ. ಡಾ॥ ಐ. ವಿ. ಶೆಟ್ಟಿ**

**ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ**
**ಅಧ್ಯಕ್ಷರು**

**ಶ್ರೀ ಹೆಚ್. ಶ್ರೀಧರ್ ಹೆಗ್ಡೆ**
**ಉಪಾಧ್ಯಕ್ಷರು**

ADVT.

# A perfect place to find your home

# Kirthi Palmville

ULTRA LUXURY 2 & 3 BHK RESIDENTIAL APARTMENT

Shiribeedu
Udupi






**RERA NO**: PRM/KA/RERA/1273/318/PR/210422/004842

**Kirthi Palmville** is located within the heart of **UDUPI,** yet away from the hustle and bustle of the town, it's a calm and serene ambience. It's a fusion of ultra-modern, high tech living style and traditional culture of home life. The **Palmville** includes a Swimming Pool, Independent Club House, Gymnasium and Children's play area. If you love nature, this is the place to revel in it.

Project Promoted by

Kirthi CONSTRUCTION

**SAMPLE FLAT READY**

Call for an appointment

99452 71353 | 81971 40844

www.kirthiconstruction.com

ADVT.

3rd Floor, Maithri Complex, Udupi - 576101 | Tele: +91 820 2530655 | email: enquiry@kirthiconstruction.com

REGISTERED KA/BGW-1589/2021-2023 RNI NO : KARBIL/2005/16402, Date of Publication 07-12-2023.
Licenced post without prepayment License No. PMG BG /WPP-219/2021-2023, Total No. of Pages 32+4=36
Licensed to post at Bengaluru PSO, Mysore Road, Bengaluru - 560026, on 10th or 12th of every Month




Printed and Published by : Sri Anandram Shetty B. on behalf of Bunts' Sangha Bangalore.
# 324, Bunts' Sangha Complex, Chord Road, Vijayanagar, Bengaluru - 560040. Editor : Aravind Shetty M.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere,
Bengaluru - 560 058. Phone : 080 - 23359588 | 23351210.